# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ


### ಯಕ್ಷಗಾನ ಪ್ರಸಂಗ

# ಸಮಗ್ರ ಮಹಾಭಾರತ
# (ಕುರುಕ್ಷೇತ್ರ)


**ಕವಿ**

## ಬೆಳಸಲಿಗೆ ಗಣಪತಿ ಹೆಗಡೆ



ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ನವೆಂಬರ್ ೩೦, ೨೦೧೯

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ್ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ್ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾ ಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ, ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ, ಶ್ರೀಕಾಂತ್ ನಾಯಕ್, ರಘುರಾಜ್ ಶರ್ಮಾ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಮ್. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ವಾಸುದೇವ ಸಾಮಗ, ಎಂ.ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣುಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ, ಉಡುಪಿ, ಯಕ್ಷಸಿಂಚನ, ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್ ಎಮ್ ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ.ಎಸ್, ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ ನಾ ಭಟ್, ರಾಘವೇಂದ್ರ ಮಯ್ಯ (ಲೆಕ್ಕಪತ್ರ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**
ಪೌರಾಣಿಕ

**ಆಧಾರ ಗ್ರಂಥ:**
ಮಹಾಭಾರತ

**ಭಾಷೆ:**
ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**
ಗಣಪತಿ ವಿಠ್ಠಪ್ಪ ಹೆಗಡೆ (ಗೋಳಗೋಡು), ಬೆಳಸಲಿಗೆ, ಸಿದ್ದಾಪುರ ಅಂಚೆ, ಉ.ಕ. (೧೯೫೩)

**ಹಕ್ಕುಸ್ವಾಮ್ಯ ವಿವರ:**
ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**
೩೭೯

**ಪಾತ್ರಗಳು:**
ಶ್ರೀಕೃಷ್ಣ, ಧರ್ಮರಾಜ, ಭೀಮ, ಅರ್ಜುನ, ನಕುಲ, ಸಹದೇವ, ದ್ರೌಪದಿ, ಸುಭದ್ರೆ, ಉತ್ತರೆ, ಅಭಿಮನ್ಯು, ಧೃಷ್ಟದ್ಯುಮ್ನ, ಸಾತ್ಯಕಿ, ಧೃತರಾಷ್ಟ್ರ, ದುರ್ಯೋಧನ, ದುಶ್ಶಾಸನ, ಕರ್ಣ, ಭೀಷ್ಮ, ದ್ರೋಣ, ಗಾಂಧಾರಿ, ಭಾನುಮತಿ, ಶಲ್ಯ, ವೃಷಸೇನ, ಅಶ್ವತ್ಥಾಮ, ಅಶ್ವಸೇನ, ಬಲರಾಮ, ಸೈಂಧವ, ವಿದುರ, ಸಂಜಯ, ವ್ಯಾಸರು, ಕೃಪ, ನಾರದರು, ಋಷಿಗಳು, ಕಿರಾತರು, ಸ್ತ್ರೀಯರು, ಭೂತಗಳು, ಚಾರಕರು

**ಕಥಾ ಸಾರಾಂಶ:**
ಧರ್ಮರಾಯನ ಅಪೇಕ್ಷೆಯಂತೆ ಕೌರವನಲ್ಲಿಗೆ ಸಂಧಾನಕ್ಕೆಂದು ಹಸ್ತಿನಾವತಿಗೆ ಶ್ರೀಕೃಷ್ಣನ ಪ್ರಯಾಣ. ಸಂಧಿಯ ಪ್ರಯತ್ನ ವಿಫಲ. ಯುದ್ಧ ನಿಶ್ಚಯ. ಭೀಷ್ಮನೊಡನೆ ಯುದ್ಧ. ಭೀಷ್ಮನ ಶರಶಯ್ಯೆ. ದ್ರೋಣನಿಗೆ ಸೇನಾಧಿಪತ್ಯ. ಅಭಿಮನ್ಯು ಕಾಳಗ. ಸೈಂಧವ ವಧೆ. ದುಶ್ಶಾಸನ ವಧೆ. ವೃಷಸೇನ ಕಾಳಗ. ಕರ್ಣಾರ್ಜುನರ ಕಾಳಗ. ಧರ್ಮರಾಯನಿಂದ ಶಲ್ಯನ ಅಂತ್ಯ. ಭೀಮಕೌರವನ ಯುದ್ಧ, ಕೌರವನ ಮರಣ. ಅಶ್ವತ್ಥಾಮ ಗರ್ವಭಂಗ. ಧರ್ಮರಾಯನಿಗೆ ಪಟ್ಟಾಭಿಷೇಕ. ಮಂಗಳ

**ಕವಿ ಪರಿಚಯ: (ಆಧಾರ: ಗಿಂಡೀಮನೆ ಮೃತ್ಯುಂಜಯ ಮತ್ತು ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**
ಬೆಳಸಲಿಗೆ ಗಣಪತಿ ಹೆಗಡೆಯವರು (೧೯೨೧-೧೯೭೭) ಉತ್ತರ ಕನ್ನಡದ ಸಿದ್ದಾಪುರ ತಾಲೂಕಿನ ಬೆಳಸಲಿಗೆಯವರು. ತಂದೆ ವಿಠ್ಠಪ್ಪ ಹೆಗಡೆ, ತಾಯಿ ಲಕ್ಷ್ಮಮ್ಮ, ಪತ್ನಿ ಕಲಾವತಿ. ಕೃಷಿಕ, ಯಕ್ಷಗಾನ ಕಲಾವಿದ. ಬಾಲ್ಯದಲ್ಲಿ ದೊರಕಿದ ಅಲ್ಪಸ್ವಲ್ಪ ಓದುಬರಹವೇ ಇವರ ವಿದ್ಯಾಭ್ಯಾಸ. ಆದರೆ ಇವರ ಕಾವ್ಯರಚನಾ ಪ್ರೌಢಿಮೆಯು ಪಂಡಿತರೂ ತಲೆದೂಗುವಂತಿದೆ. ಸಮಗ್ರ ಮಹಾಭಾರತ (ಅರ್ಥಾತ್ ಕುರುಕ್ಷೇತ್ರ) ವು ಇವರ ಮೊದಲ ಕೃತಿ. ಕಾರಣಾಂತರಗಳಿಂದ ಯಕ್ಷಗಾನದ ಕವಿಗಳ ಸಾಲಿನಲ್ಲಿ ಇವರಿಗೆ ಸಿಗಬೇಕಾಗಿದ್ದ ಸ್ಥಾನ ಸಿಕ್ಕಿಲ್ಲವೆಂದು ಕಾಣುತ್ತದೆ.

ಇವರು ಬರೆದ ಪ್ರಸಂಗಗಳು: ಸಮಗ್ರಭಾರತ, ಸಂಪೂರ್ಣ ರಾಮಾಯಣ, ಕೌಂತೇಯ ಕರ್ಣ, ಆಂಜನೇಯ ಪರಾಜಯ, ವಸಂತಸೇನಾ, ಕಲಿಗರ್ವಭಂಗ, ಶ್ರೀಮತೀಪರಿಗ್ರಹ, ಪಾರ್ವತೀ ಆಗ್ರಹ, ಪುತ್ರಬಲಿದಾನ, ತ್ರಿಭುವನ ವಿಜಯ, ಸತೀಸಾಮರ್ಥ್ಯ, ಅಹಲ್ಯೋದ್ಧಾರ, ಇಟಗಿ ಕ್ಷೇತ್ರಮಹಾತ್ಮೆ, ಮಾಯಾ ಮಂದಾರವತಿ, ಗಂಗಾವತರಣ, ಚ್ಯವನ – ಸುಕನ್ಯಾ, ಓಘವತೀ ಪರಿಣಯ, ವಿಕ್ರಮಾದಿತ್ಯ ವಿಜಯ, ಸೀತಾರಾಮ ಪರಂಧಾಮ, ದುಷ್ಯಂತ ಶಾಕುಂತಲಾ, ಮಹಾಸತಿ ಮಂಡೋದರಿ, ಭಾನುತೇಜಸ್ವಿ, ಕನ್ನಡ ಕೇಸರಿ, ಕನ್ಯಾರತ್ನ, ಸೌಭಾಗ್ಯಪ್ರದಾನ

**ಟಿಪ್ಪಣಿ:**
ಹೆಚ್ಚು ಬಳಕೆಯಲ್ಲಿ ಇಲ್ಲದ ಪ್ರಸಂಗ.

# ಪ್ರಸಂಗ ಸಾಹಿತ್ಯ

**ಶಾರ್ದೂಲವಿಕ್ರೀಡಿತ ವೃತ್ತ**

ಶ್ರೀಮತ್ಕೌಸ್ತುಭವಕ್ಷನುಂ ಶ್ರುತಿನುತಂ ಶ್ಯಾಮಂ ತ್ರಿಲೋಕಾರ್ಚಿತಂ |
ಕಾಮಾರಿಪ್ರಿಯ ಪದ್ಮಪೀಠಜನಕಂ ದಾಮೋದರಂ ಚಿನ್ಮಯಂ ||
ಭೀಮಂ ದುಷ್ಟಗಣಾಯ ಶಿಷ್ಟನಿಚಯಾರಾಮಂ ಸದಾ ಶಾಂತಿದಂ |
ಕ್ಷೇಮಂ ಭಕ್ತಜನಸ್ಯ ಭೀಷ್ಟಮತುಲಶ್ರೀದಾಯಕಂ ಶಂ ಭಜೇ || ೧ ||

**ನಾಟಿ - ಝಂಪೆ**

ವಾರಣವದನ ಹರ | ಗೌರಿ ವರಸುಕುಮಾರ |
ಘೋರ ದುರಿತ ವಿದೂರ | ವಿಘ್ನ ಪರಿಹಾರ ||
ಗೀರ್ವಾಣನುತಿಘೋಷ | ಸೂರ್ಯಶತಸಂಕಾಶ |
ಚಾರು ಕಪಿಲಪುರೇಶ | ಪೊರೆಯೆಮ್ಮನನಿಶ || ೨ ||
ಮುಕ್ತಿದಾಯಕ ಭೀಮ | ಶಕ್ತಖಿಳ ನಿರ್ನಾಮ |
ಭಕ್ತಜನ ಸುಪ್ರೇಮ | ನಾಮ ಜಿತಕಾಮ ||
ರಕ್ತಚರ್ಚಿತ ದೇಹ | ಸೂಕ್ತ ಮಂಗಲಗೇಹ |
ವ್ಯಕ್ತಜಗ ನಿರ್ವಾಹ | ರಕ್ಷಿಸಿಲಿವಾಹ || ೩ ||
ದೋಷಹರ ಸರ್ವೇಶ | ಶೇಷವರ ಕಟಿದೇಶ |
ಪಾಶಾಂಕುಶ ವಿಭೂಷ | ಆಶ್ರಿತ ವಿಲಾಸ ||
ಆ ಸುರಾಸುರ ಭುಜಗ | ಭೂಸುರಾದ್ಯಖಿಲ ಜಗ |
ವಾಸನುತ ಪೊರೆಯೈ ಗ | ಣೇಶ ನತಪೋಷ || ೪ ||

**ಭಾಮಿನಿ**

ಅಮಲಭಕ್ತಿಗಳಿಂದ ವೇಂಕಟ |
ರಮಣನಡಿಗಳಿಗೆರಗಿ ಹರಿಹರ |
ಕಮಲಜಾದ್ಯರ ನುತಿಸಿ ರಮೆಯುಮೆ ವಾಣಿಯರ ಭಜಿಸಿ ||
ಕ್ರಮದಿ ಗುರುಹಿರಿಯರ ಪದಾಬ್ಜವ |
ನಮಿಸಿ ವ್ಯಾಸಾದ್ಯಖಿಲ ಕವಿಗಳ |
ಮಮತೆಯಲಿ ಬಲವಂದು ರಚಿಸುವೆನೆಕ್ಷಗಾನದಲಿ || ೫ ||

**ವಾರ್ಧಕ**

ಅರಸ ಜನಮೇಜಯಂಗೊಲಿದು ವೈಶಂಪಾಯ |
ನರುಹಿದೀ ಸತ್ಕಥೆಯ ಯಕ್ಷಗಾನದಿ ರಚಿಪೆ |
ಸ್ವರ ತಾಳ ಯತಿ ಗಣ ಪ್ರಾಣ ಪ್ರಾಸಗಳೊಂದನರಿಯೆನಿದ ಬಾಲಭಾಷೆ ||
ಹರಿಯು ಪ್ರೇರಿಸಿದಂತೆ ಬರೆದಲ್ಪಕೃತಿಯಿದನು |
ಧರೆಯ ವಿದ್ವಜ್ಜನರ ಚರಣಕರ್ಪಣಗೈವೆ |
ನಿರಲು ದೋಷವ ತಿದ್ದಿ ಮೆರೆಸಿ ಲೋಕದೊಳೆಂದು ಎರಗುವೆನು ಸುಜನತತಿಗೆ || ೬ ||

**ಸೌರಾಷ್ಟ್ರ - ತ್ರಿವುಡೆ**

ಅರಸ ಜನಮೇಜಯಗೆ ಭಾರತ |
ವರಮಹಾ ಸತ್ಕಥೆಯ ಬೋಧಿಸು |
ತಿರಲು ವೈಶಂಪಾಯನಗೆ ನೃಪ | ನೆರಗಿ ಮುದದಿ || ೭ ||
ಹರಿಯ ತಂತ್ರದಿ ಕುರು ಚತುರ್ಬಲ |
ಶರಧಿಯನು ಬರಿಗೈದು ಧರ್ಮಜ |
ಧರೆಯನಾಳಿದನೆಂತು ಸಾಂಗದೊ | ಳರುಹು ದಯದಿ || ೮ ||
ಎಂದು ನೃಪ ಮಗುಳೆರಗುತಿರಲಾ |
ನಂದ ಮಿಗೆ ತೆಗೆದೆತ್ತಿ ಮುನಿಪ ಮು |
ಕುಂದನಮಲ ಚರಿತ್ರೆಗಳ ಮುದ | ದಿಂದುಸುರ್ದ || ೯ ||

**ವಾರ್ಧಕ**

ಧರಣಿಪತಿ ಕೇಳ್ ಪಾಂಡುತರಳರವಧಿಯ ಕಳೆದು |
ಕುರುರಾಯನೋಳ್ ಕ್ಷಿತಿಯ ಕೇಳಿಸಿದಡಾತ ಸಂ |
ಗರ ಮುಖದಿ ಕೊಂಬುದೆನಲರಿತು ಯಮಸುತ ಹರಿಯ ಕರುಣದೊಲವಂ ಸಾಧಿಸಿ ||
ಹರುಷದಿಂದನುಜರೊಡವೆರೆದುಪಪ್ಲವದಿ ಮುರ |
ಹರನ ಸಹಿತೋಲಗಂಗೊಟ್ಟು ಮನದಿರವ ಶ್ರೀ |
ವರನ ಚರಣಾಂಬುರುಹಕೆರಗಿ ಸದ್ಭಕ್ತಿಯಿಂದರುಹಿದಂ ಕರವ ಮುಗಿದು || ೧೦ ||

**ಕಾಂಬೋಧಿ - ಝಂಪೆ**

ಮಾಮನೋಹರನೆ ಕುರು | ಭೂಮೀಶನೆಡೆಗೈದಿ |
ಸೀಮೆಯರ್ಧವ ಸಾಮದಿಂದ ||
ಪ್ರೇಮದಿಂದೆಮಗೀಯ | ಲರುಹಿ ಸಂಧಿಯ ಗೈದು |
ನೀ ಮರಳು ದಯದೊಳೆನಲೆಂದ || ೧೧ ||
ನೀತಿಯೇನೈ ಸ್ವಜನ | ಘಾತುಕನೊಳೀ ಪರಿಯ |
ಪ್ರೀತಿಯಿರಿಸುವುದುಂಟೆ ಪೇಳು ||
ಭೂತಳಾಧಿಪರ ಬಿರು | ದಲ್ಲದರೊಳಾದಿಯಬು |
ಜಾತಕುಲಭವರು ನೀವೆನಲು || ೧೨ ||
ಪಾತಕದ ಫಲವನುಣ | ಲೇತಕವರೆಣಿಕೆ ನೃಪ |
ನೀತಿಗೋಸುಗ ಸಂಧಿಗಾಗಿ ||
ನೀ ತೆರಳ್ವುದೆಮಗೆ ನಿಜ | ಗೋತ್ರವಧೆ ಬೇಡೆನಲು |
ವಾತಸುತನೆಂದ ಖತಿ ಮಸಗಿ || ೧೩ ||
ಏನಿದೇನಗ್ರಭವ | ಮಾನಿನಿಯನೆಮ್ಮಿದಿರು |
ತಾನೆಳೆದ ಗೆಲಿದು ಕಳವಿನಲಿ ||
ಕಾನನವ ಪೊಗಿಸುತಾ | ಹ್ವಾನಿಸಿದ ರಣಕೆ ಮ |
ತ್ತಾನರಾಧಮನ ಸಮರದಲಿ || ೧೪ ||
ಘಾತಿಸದೆ ಬೇಡುವರೆ | ಪೇತುಕರ ತೆರದಿ ಮಮ |
ಜ್ಞಾತಿಯೆನುತಾ ಖಳಗೆ ಬಾಗಿ ||
ಪ್ರೀತ ನಿನಗವನಾದ | ಡಾತನೊಡನಿಹುದು ತವ |
ನೀತಿಯನು ಬಿಡದೆ ಲೇಸಾಗಿ || ೧೫ ||

**ಭಾಮಿನಿ**

ಹೀರಿ ದುಶ್ಶಾಸನನ ರಕ್ತವ |
ಊರುಗಳ ಪುಡಿಗೈದು ಕೌರವ |
ನೂರು ಪಿಳ್ಳೆಯನರೆದು ಮಿಕ್ಕಿನ ವೀರವರ್ಗವನು ||
ಸೂರೆಗೊಂಡಾಹವದಿ ದ್ರುಪದ ಕು |
ಮಾರಿಯನು ಸಂತೈಸದಿರೆನೆಂ |
ದಾರುಭಟಿಸಲು ನಯದಿ ಧರ್ಮಕುಮಾರ ಮಗುಳೆಂದ || ೧೬ ||

**ಸೌರಾಷ್ಟ್ರ - ತ್ರಿವುಡೆ**

ತಮ್ಮ ಸೈರಿಸು ಖತಿಯ ಕೌರವ |
ರೆಮ್ಮವರು ಮಗುಳೊಮ್ಮೆ ಸಾರುವ |
ಧರ್ಮವರಿಯೆಯ ದಯದಿ ಸಂಧಿಗೆ | ಸಮ್ಮತಿಯನು || ೧೭ ||
ನೀಡೆನುತ ವಿನಯದಲಿ ಧರ್ಮಜ |
ಬೇಡುತಿರೆ ಬೇಸರದಿ ಮಾರುತಿ |
ಮಾಡು ನೀ ಮನಬಂದ ತೆರನೆಂ | ದಾಡುತಿರಲು || ೧೮||
ಕೇಳಿ ದ್ರುಪದಜೆ ಕೆರಳಿ ಫಣಿಪನ |
ಬಾಲವನು ತುಳಿದಂತೆ ಭೀಮನ |
ಆಳುತನ ಸಾಕೆನುತ ಸೆಳೆದಳು | ತೋಳ ಗದೆಯ || ೧೯ ||

ಬೇಡವಿದು ನಿನಗೇತಕಡಿಗೆಯ |
ಮಾಡು ನಡೆ ಬಾಣಸಿಗ ರಿಪುಗಳ |
ಸೇಡ ಮಗುಚುವೆ ತಾನೆ ಕರುಳನು | ತೋಡಿ ರಣದಿ || ೨೦ ||
ಆಡಿದಂದವನುಳಿದಧೋಗತಿ |
ಗೂಡಿಪರೆ ಕುಲಕೋಟಿ ಪಿತೃಗಳ |
ರೂಢಿಪತಿಗಳೆನುತ್ತ ಭೀಮನ | ನೋಡಿ ಜರೆಯೆ || ೨೧ ||

**ಭಾಮಿನಿ**

ಕಾಮಿನಿಯ ಮೂದಲೆಗೆ ವಿಲಯದ |
ಭೀಮನಂತುರಿಮಸಗಿ ಬೊಬ್ಬಿರಿ |
ದಾ ಮರುತ್ಸುತನೆಂದನಣ್ಣಗೆ ಸಿಂಹನಾದದಲಿ ||
ಭೂಮಿಪತಿ ತವ ನೇಮವಿಂದಿಗೆ |
ಹೋಮಿಸಿದುದವಮಾನ ಶಿಖಿಯಲಿ |
ನೀಮದಗ್ರಜನಲ್ಲ ಸಹಭವನಲ್ಲ ತಾನೆನುತ || ೨೨ ||

**ಮಾರವಿ - ಏಕ**

ಬಿಡು ಬಿಡು ಚಿಂತೆಯ | ಜಡಜಾನನೆ ಬಡಿ |
ದಿಡುಕುತ ರಿಪು ತತಿಯ ||
ಮಡದಿಯರನು ಗೋ | ಳಿಡಿಸುವೆ ತೀರ್ಚುವೆ |
ಬಿಡದೆನ್ನಯ ನುಡಿಯ || ೨೩ ||
ಬಗೆಯ ನಿರೀಕ್ಷಿಸಿ | ನಗುತ ಮುರಾಂತಕ |
ಜಗಳದಿ ನೀನೋರ್ವ ||
ವಿಗಡ ಬಲಾಢ್ಯರ | ಬಿಗುವ ಮುರಿವುದಿದು |
ಜಗತಿಯೊಳಾಶ್ಚರ್ಯ || ೨೪ ||
ಈಶನ ಮರೆಗೊಂ | ಡಿರಲಬುಜಾಸನ |
ನಾಶ್ರಯಗೊಳಲೀಗ ||
ನಾ ಸೆಳೆದಹಿತರ | ಘಾಸಿಪೆ ತವ ದಯ |
ವೀಸಿರಲೆನಲಾಗ || ೨೫ ||

**ಭಾಮಿನಿ**

ಖ್ಯಾತ ಫಲುಗುಣ ಕೆರಳಿ ರಿಪುಗಳ |
ವ್ರಾತವನು ಸದೆಬಡಿವದಲ್ಲದೆ |
ನೀತಿ ಬೇರಿಲ್ಲೆನಲಿಕಂತಕಜಾತ ಮಗುಳೆಂದ ||
ಮಾತುಳಾಂತಕ ಕೇಳು ಸಂಧಿಯ |
ಮಾತ ಕೌರವ ಮುರಿಯೆ ಸಮರವ |
ನಾತನಲಿ ನಿಶ್ಚೈಸಿ ಬಹುದೆನಲಾತತುಕ್ಷಣದಿ || ೨೬ ||

**ಸಾಂಗತ್ಯ - ರೂಪಕ**

ಸುರಿವ ಕಂಬನಿಯಿಂದ | ಚರಣವ ತೊಳೆವುತ್ತ |
ಶರಜಾಕ್ಷಗೆರಗಿ ದ್ರೌಪದಿಯು ||
ಮರುಗಲಾಕೆಯ ಶಿರ | ವೆರಡು ಕೈಯಿಂದೆತ್ತಿ |
ಕರುಣದೊಳೆಂದ ಶ್ರೀಪತಿಯು || ೨೭ ||
ಮರುಗಲೇಕೌ ತಂಗಿ | ಒರೆ ನಿನ್ನ ಮನಸಿನ |
ಕೊರತೆಯೇನೆಂಬ ಸಂಗತಿಯ ||
ಪರಿಹರಿಸುವೆ ಪುರ | ಹರನಾಣೆ ಪುಸಿಯಲ್ಲ |
ತರಳಾಕ್ಷಿ ಬಿಡು ಬಿಡು ವ್ಯಥೆಯ || ೨೮ ||

ಕಡು ಪಾಪಿ ದುಶ್ಶಾಸ | ನುದರ ರಕ್ತದೊಳದ್ದಿ |
ಮುಡಿಯ ಕಟ್ಟಿಸುವೆನೆಂದೆನಗೆ ||
ಜಡಜಾಕ್ಷ ನೀ ವಡ | ಬಡಿಸಿ ಪೇಳಿದ ನುಡಿ |
ನಡೆಯದೆ ಪೋದುದೀವರೆಗೆ || ೨೯ ||

**ಭಾಮಿನಿ**
ತಂಗಿ ಮರುಗದಿರೇಳು ನಿನ್ನನು |
ಭಂಗಿಸಿದ ಪಾಪಾತ್ಮರಲಿ ರಣ |
ರಂಗವನು ಸಾಧಿಸುತ ನಿಮ್ಮವರಿಂದ ಖಳಕುಲವ ||
ಹಿಂಗಿಸುತ ನುಡಿ ಸಲಿಸಿದಪೆ ನಿಜ |
ತಣ್ಣದಿರಮುಖಿ ಸತ್ಯವೆನುತ ವಿ |
ಹಂಗರಥ ಕಂಬನಿಯನೊರಸಿದನುಟ್ಟ ಸೆರಗಿಂದ || ೩೦ ||

**ವಾರ್ಧಕ**
ನರಕಾಂತ ಕೇಳಿಂತು ದ್ರೌಪದಿಯ ಸಂತೈಸಿ |
ನರಕಾಂತಕಂ ದಿವ್ಯ ರಥದಿ ಪೊರಮಡಲು ಕುರು |
ನರಕಾಂತನೆಡೆಗೆ  ಪೊಗಳಲ್ ನಭದಿ ಹವಿಯಾಶನರಕಾಂತ ಮುಖ್ಯ ಸುರರು ||
ನರಕಾಂತರಿಪು ಕಣ್ವ ನಾರದಾದ್ಯ ತಪೋಧ |
ನರಕಾಂತರೊಡನೆ ಗಜನಗರವಂ ಪೊಕ್ಕು ಸುಜ |
ನರಕಾಂತ ವಿದುರನರಮನೆಗೆ ಸಾಗಿದನು ವಾನರಕಾಂತಕೇತಸಖನು || ೩೧ ||

**ಭಾಮಿನಿ**
ಸುರರ ಪೊಳಲಂತೆಸೆದುದಾಯಿಭ |
ಪುರದ ವೈಭವ ಮರುದಿನದಿ ಕುರು |
ವರನ ಸಿರಿಯೋಲಗ ಸುಧರ್ಮವ ಮೀರಿ ರಂಜಿಸಿತು ||
ಪರಿಯ ಕಂಡಾ ಕೌರವೇಶ್ವರ |
ಹರುಷ ಶರಧಿಯೊಳಾಳಿ ಕರ್ಣನ |
ಕರವಿಡಿದು ಮನ್ನಿಸುತ ಸಕಲರನೇರ್ದನಾಸನವ || ೩೨ ||

**ಕಾಂಬೋಧಿ - ಝಂಪೆ**
ಮೆರೆದಿರಲು ಸಭೆಯೊಳಗೆ | ಅರಸ ಧೃತರಾಷ್ಟ್ರ ನದಿ |
ತರಳ ಬಾಹ್ಲಿಕ ದ್ರೋಣ ಕೃಪರು ||
ಸುರುಚಿರಾಸನದಿ ಸೋ | ದರ ಪುತ್ರ ಮಿತ್ರಾಪ್ತ |
ರಿರಲಖಿಲ ಸಾಮಂತ ನೃಪರು || ೩೩ ||
ಕಾಣಿಕೆಯನಿತ್ತೆರಗ | ಲಾನತರ ನುಡಿಸುತಭಿ |
ಮಾನಧನನೆಂದ ನಸುನಗುತ ||
ಏನಿದೆಮಸುತ ಮರಳಿ | ಸಂಧಿಗಟ್ಟಿಹನಂತೆ |
ಹೀನ ಕೃಷ್ಣನನಿಲ್ಲಿಗೆನುತ || ೩೪ ||
ರಾಜ್ಯವನು ಸೋತು ಗೆಲಿ | ದಾರ್ಜಿಸದೆ  ಬೇಡಲಿದು |
ಪ್ರಾಜ್ಞಮತವಹುದೆ ವಿಧುಕುಲದಿ||
ಪೂಜ್ಯ ನೃಪರಾಳಿದವಿ | ಭಾಜ್ಯಪದವಿದನೊಡೆವ |
ರಾರ್ಜಗದೊಳೆಮ್ಮ ಜೀವಿತದಿ || ೩೫ ||
ಜಗಳವಲ್ಲದೆ ಸೂಜಿ | ಯಗಲವನಿ ಸಿಗದೆನುತ |
ಮುಗುದೆಯರ ಗೀತನರ್ತನದ ||
ಮಿಗೆ ವಾದ್ಯಪಾಠಕರ | ಪೊಗಳಿಕೆಯ ಸಪ್ತಾಂಗ |
ಸುಗಣವಹ ಸಭೆಯೊಳೆಸದಿರ್ದ || ೩೬ ||

**ಸೌರಾಷ್ಟ್ರ - ತ್ರಿವುಡೆ**
ಬಂದನಾ ಸಭೆಗಾಗಿ ಹರಿ ಮುದ |
ದಿಂದ ಮುನಿಜನಸಹಿತ ದೂರದಿ |
ಕಂಡು ಭೂವರನಿರವ ವಿದುರನೊ | ಳೆಂದ ನಗುತ || ೩೭ ||
ಲೇಸು ಕೌರವನೀಸು ವೈಭವ |
ನಾಶವೊಂದುವದೈಸೆ ಶಿವ ಶಿವ |
ಏಸು ನುಡಿದಿನ್ನೇನು ಸಂಧಿಯ | ಮೀಸಳಲಿಯೆ || ೩೮ ||
ಎನುತ ಮುಂದೈತರಲಿಕಂಧಕ |
ಜನಪ ನದಿಸುತರೆದ್ದು ಪೀಠವ |
ಚಿನುಮಯಂಗಿತ್ತೆರಗಿ ಮನ್ನಿಸೆ | ಮುನಿಗಣವನು || ೩೯ ||
ನುಡಿಯದಿಹ ಭೂವರನನೀಕ್ಷಿಸಿ |
ಜಡಜಲೋಚನನೆಂದನೆಮ್ಮಯ |
ನಡತೆಯಲಿ ಕುಂದೇನು ಮೌನವು | ಪೊಡವಿಪಾಲ || ೪೦ ||
ನುಡಿಗೆ ಖತಿಗೊಂಡಾ ಸುಯೋಧನ |
ನಡತೆಯದನೆಂತೊರೆವೆ ಭೂಮಿಪ |
ರೊಡೆಯನಿಗೆ ಮಾತೇನು ಗೊಲ್ಲರ | ಹುಡುಗನೊಡನೆ || ೪೧ ||
ನಂಟತನ ಲೇಸಹುದು ಗೋಪಗೆ |
ಗಂಟು ತೊತ್ತಿನ ಸುತನು ನಮ್ಮೊಡ |
ನುಂಟೆ ಕಾರ್ಯಗಳುಸುರು ನುಡಿ ಹಲ | ವೆಂಟದೇಕೆ || ೪೨ ||

**ಕೇದಾರಗೌಳ - ಅಷ್ಟ**
ಮಾಧವ ನಗುತೆಂದ | ಸೋದರತ್ತೆಯ ಕಾಣ |
ಪೋದೆ ನಂಟತೆಯಹುದು ||
ಆದರಿಲ್ಲಿಗೆ ನಂಟಿ | ಗಾಗಿ ಬಂದೆನೆ ಬರಿ |
ವಾದದಲೇನಿಹುದು || ೪೩ ||
ಹಿಂದೆ ದ್ಯೂತದಿ ನುಡಿ | ದಂದ ತೀರಿಸಿ ಧರ್ಮ |
ನಂದನ ಕರತಲವ ||
ಸಂಧಿಸಿಕ್ಕಿದ ಮುದ | ದಿಂದ ಮನ್ನಿಸಿ ಕ್ಷೇಮ |
ದಿಂದುಳುಹೈ ಕುಲವ || ೪೪ ||
ಸರಿಯ ಕಾಣೆನು ಸುರ | ನರರೊಳು ನಿನ್ನಯ |
ಸಿರಿಯ ಸಂಪದಕೆ ರಾಯ ||
ಧರಣಿಯರ್ಧವನಿತ್ತು | ಹರುಷದಿ ಕುಂತಿಯ |
ತರಳರ ಮನ್ನಿಸಯ್ಯ || ೪೫ ||

**ಕೇದಾರಗೌಳ - ಝಂಪೆ**
ಬೇಡಲಾರರು ಕ್ಷತ್ರಿಯ | ವರ್ಣಜರು |
ನೀಡರೆಂದಿಗು ಧಾತ್ರಿಯ ||
ಮಾಡಿ ಘನತರ ಭಾಷೆಯ | ಎಮ್ಮೊಡನೆ |
ಕೂಡಿಹರೆ ಸತ್ಯವಯ್ಯ || ೪೬ ||

**ಕಾಂಬೋಧಿ - ಝಂಪೆ**
ಬೇಡರೆಂದಿಗು ತಮ್ಮ | ದಾದ ಮೇದಿನಿಯರ್ಧ |
ಸಾಧಿಸಲು ಸಂಧಿಗಟ್ಟಿದರು ||
ಮಾಡಿದಪರಾಧಗಳ | ಸಾದರದಿ ಮನ್ನಿಸುವ |
ರಾದಯಾಳುಗಳ ದೂರದಿರು || ೪೭ ||

**ಕೇದಾರಗೌಳ - ಝಂಪೆ**
ಇಳೆ ಯಾರದೆಂಬುದಿಲ್ಲ | ವಿಕ್ರಮದ |
ಫಲವೆಂಬುದರಿವರೆಲ್ಲ ||
ಬಲವ ಕಂಡೊಲಿವ ಸಿರಿಯು | ಹೇಡಿಗಳ |
ಬಳಗಕೆ ಬಿಸಿಲ್ಗುದುರೆಯು || ೪೮ ||

**ಕಾಂಬೋಧಿ - ಝಂಪೆ**
ಗೋತ್ರವಧೆಗಲಸಿ ಸಹ | ಜಾತರನೊಡಂಬಡಿಸಿ |
ನೀತಿಯನಪೇಕ್ಷಿಸಿದ ಯಮಜ ||
ಖ್ಯಾತಿಗೊಂಡರೆ ಭೀಮ | ಪಾರ್ಥರೀತ್ರೈಜಗವ |
ಧಾತುಗೆಡಿಸುವರಿದುವೆ ಸಹಜ || ೪೯ ||

**ಕೇದಾರಗೌಳ - ಝಂಪೆ**
ಗಳಹಬೇಡೆನ್ನೊಳವರ | ವಿಕ್ರಮದ |
ವಳವನರಿತಿಹೆನು ವಿವರ ||
ಕಲಿಗಳಾದರೆ ಕದನದಿ | ಕೊಂಬುದಾ |
ನಿಳೆಯ ಕೊಡೆ ನಡೆ ಸಾಮದಿ || ೫೦ ||

**ಕಾಂಬೋಧಿ - ಝಂಪೆ**
ಬಳಗ ಸಹಿತಿಳೆಗಾಗಿ | ತಲೆಯ ತೆರದಿರು ಸಾರ್ದೆ |
ಕಲಹ ಬೇಡಂತ್ಯಕೈದೂರ ||
ಒಲಿದಿತ್ತು ನಿನ್ನವರ | ಸಲಹಿಕೊಂಬುದು ಬರಿದೆ |
ಕೊಲಿಸದಿರು ಜಗವ ಕುರುವೀರ || ೫೧ ||

**ಸುರುಟಿ - ಏಕ**
ಗ್ರಾಮವದಿರಲೀಗ | ಗೋಷ್ಪದ |
ಭೂಮಿಯ ಕೊಡೆ ಬೇಗ ||
ಕ್ಷೇಮದಿ ನಡೆ ನಡೆ | ಸಾಮದ ವಾರ್ತೆಯ |
ನೀ ಮಗುಳರುಹದೆ | ಕಾಮುಕ ಗೋವಳ || ೫೨ ||
ಮುರಲಿಯ ಧ್ವನಿಯಿಂದ | ಸತಿಯರ |
ಕರವುತ ತುರುವಿಂಡ ||
ತೆರಳಿಸಿ ವನ ವನ | ಚರಿಸಿದ ವಿಕ್ರಮ |
ಮೆರಸಲರಿದು ನೃಪ | ವರರೆಮ್ಮಿದಿರೊಳು || ೫೩ ||
ಮಾತುಳನನು ಕೊಂದು | ತಿಳುಹುವೆ |
ನೀತಿಯನೆನಗಿಂದು ||
ಪಾತಕಿ ತೆರಳೆಂ | ದಾತ ಜರೆಯಲಬು |
ಜಾತನಯನ ಗತ | ನೇತ್ರನೊಳೆಂದನು || ೫೪ ||

**ಭಾಮಿನಿ**
ಸಾಧುಗಳ ಹಗೆತನದಿ ಕೊಲಿಸುವ |
ನೀ ದುರಾತ್ಮನು ಕುಲವ ಸಂಶಯ |
ಬೇಡ ಬಂಧಿಸುತಿವನ ಮನ್ನಿಸು ಪಾಂಡುತನಯರನು ||
ಖೇದ ಪಡದಿರು ಲೋಕಕಂಟಕ |
ನಾದವನು ಸುತನಲ್ಲವೆನೆ ದುರಿ |
ಯೋಧನನು ಕಿಡಿಗೆದರಿ ಕೋಪದಿ ಸಹಜರೊಡನೆಂದ || ೫೫ ||

**ಮಾರವಿ - ಏಕ**
ದುಷ್ಟನಿವನ ಹಿಂಗಟ್ಟು ಬಿಗಿದು ಬಿಡ |
ದಟ್ಟಿರಿ ಸೆರೆಮನೆಗೆ ||
ಶಿಷ್ಟರಿದಿರು  ಮದ | ವೆಷ್ಟೀದೂತಗೆ |
ಕುಟ್ಟಿರಿ ಹಲುಗಳಿಗೆ || ೫೬||
ದೋಷವೆನುತ ಧೃತರಾಷ್ಟ್ರ ನದೀಸುತ |
ರೇಸೆಂದರು ಬಿಡದೆ ||
ಪಾಶವಿಡಿದು ದುಃ | ಶಾಸನ ಮುಖ್ಯರು |
ಕೇಶವನೆಡೆಗೈದೆ || ೫೭ ||
ಕಂಡಬುಜೋದರ ಬಂಧಿಸಬಹುದೆನು |
ತಂದತಿ ಲೀಲೆಯಲಿ ||
ಮಂದರಧರಮಯ | ವೆಂದೆನಿಸಿದ ಪುರ |
ವಂದೆ ಕ್ಷಣಾರ್ಧದಲಿ || ೫೮ ||

**ಭಾಮಿನಿ**
ಕರಿಯ ಬಂಧಿಸಲಹವೆ ನೊರಜುಗ |
ಳಿರುವೆ ಮೇರುವ ನೆಗಹಬಲ್ಲವೆ |
ಹರಿಯ ದುಡುಕಿ ಶೃಗಾಲತತಿ ಗೆಲಿದಪವೆ ಚಿನುಮಯನ ||
ಕೆರಳಿ ಪಿಡಿವನದಾವನನಿಬರು |
ಸರಿಯಲಘಹರ ವಿಶ್ವರೂಪವ |
ಕುರುಪತಿಯನುಳಿದೆಲ್ಲರಿಗೆ ತೋರಿಸುತಲುತ್ಸವದಿ || ೫೯ ||

**ಕಂದ ಪದ್ಯ**
ಪೃಥೆಯೆಡೆಗೈದಿ ವಿಭಾಕರ |
ಸುತನೊಳು ಹುರಿಗಣೆಗಳ ಬೇಡೆನುತತಿ ಜವದಿಂದಂ ||
ಕಥಿಸುತ ಜನ್ಮರಹಸ್ಯವ ಕರ್ಣನ |
ಜತೆಯಗಲುತಲಾಗಮಿಸಿ ಯುಧಿಷ್ಠಿರಗಿತಿವಾರ್ತೆಯನೊರೆದಂ || ೬೦ ||

**ವಾರ್ಧಕ**
ಹರಿ ನಡೆದ ವಾರ್ತೆಯಂ ತಿಳುಹೆ ಧರ್ಮಜ ರಣಕೆ |
ನೆರಹಿ ಸಪ್ತಾಕ್ಷೋಹಿಣೀ ಬಲವ ಪಾಂಚಾಲ |
ತರಳನಧಿಕಾರದಿಂ ಪೊರಡಿಸಿದ ಸೋದರರ್ವೆರದು ಶ್ರೀಕಾಂತನೊಡನೆ ||
ಕುರುಕ್ಷೇತ್ರಕೈದಿ ಢೇರೆಯನಿಕ್ಕಿ ಮೆರೆದಿರಲ್ |
ಅರಿದು ಕೌರವ ವೈರಿಧುರಕೆ ಭೀಷ್ಮನೆನುತ್ತ |
ಸರಿನಿಶಿಯೊಳೈತಂದು  ಪದಕೆರಗಲಮರನಿರ್ಝರಣಿಸುತನೆತ್ತಿ ಮುದದಿ || ೬೧ ||

**ಕೇದಾರಗೌಳ - ಝಂಪೆ**
ಬಾ ಮಗನೆ ಕೌರವೇಂದ್ರ | ಕುರುವಂಶ |
ದಾಮಹಾರ್ಣವದ ಚಂದ್ರ ||
ಯಾಮಿನಿಯೊಳಿನಿತೋರ್ವನೆ | ನೃಪಸಾರ್ವ |
ಭೌಮ ಬರಲೇಕೆ ನೀನೆ || ೬೨ ||
ಕಾರ್ಯವಿರಲೇಗೆನ್ನೊಡೆ | ತಿಳುಹಿ ಚರ |
ನೋರ್ವನಟ್ಟಿದಡಾಗದೆ ||
ಊರ್ವಿಪತಿಯರುಹು ಮನದ | ಬಯಕೆಯದ |
ನಿರ್ವಹಿಪೆನೆನಲರುಹಿದ || ೬೩ ||
ವಾಹಿನಿಯ ಧುರಕಾಗಿ ಯೇ | ಕಾದಶ |
ಕ್ಷೋಹಿಣಿಯನಣಿಗೈದಿಹೆ ||
ಮೋಹರಕ್ಕೊಡೆಯನೆನಿಸಿ | ಸಲಹೆಮ್ಮ |
ನಾಹವದೊಳರಿಯ  ಜೈಸಿ || ೬೪ ||

ಧರೆಯ ಭಾರವ ಕಳೆಯಲು | ಜಗದೊಳವ |
ತರಿಸಿದಾ ಹರಿಕೃಪೆಯೊಳು ||
ಧುರದೊಳಳುಕರು ಕುಂತಿಯ | ತನುಭವರು |
ಪರರೆ ಕೊಡು ಸಮಧಾತ್ರಿಯ || ೬೫ ||
ಆಗದಾಗದು ಬಾಹುಜ | ನೀತಿಗಳ |
ನೀಗಿ ಕೊಡೆನಿಳೆಯ ಸಹಜ ||
ನಾಗತಲ್ಪನ ಕೃಪೆಯಲಿ | ಕೂಡಿರಲಿ |
ಭೋಗಿಭೂಷನೆ ತಡೆಯಲಿ || ೬೬ ||

**ಭಾಮಿನಿ**
ಅರಸನಾಡಿದ ನುಡಿಗೆ ಜಾಹ್ನವಿ |
ತರಳ ಮನದಲಿ ಕರಗಿ ಮರುಗುತ |
ಸರುವಥಾ ಬಿಡ ಛಲವ ಮತ್ತಿವಗರುಹಿ ಫಲವೇನು ||
ತೊರೆಯೆ ಬಹುದಪಕೀರ್ತಿ  ಪಾರ್ಥಿವ |
ರುರು ಸುಪಂಥದಿ ಕಾದಿ ಶ್ರೀನರ |
ಹರಿಯನೊಲಿಸುವೆನೆನುತಲುದಯಕೆ ಬಹೆನು ತೆರಳೆಂದ || ೬೭ ||

**ವಾರ್ಧಕ**
ಅರಸನಂ ಕಳುಹಿ ನದಿತನಯ ಚಿಂತಿಸಿ ಮನದಿ |
ತರಳರನು ಕೊಲಲಾರೆ ಕುರುಪತಿಯ ಬಿಡಲಾರೆ |
ಧರೆಯೊಳಾನಿರಲಾರೆ ತೊರೆದು ತನುವೀಸಾರೆ ತೆರಳಲಿದು ಸಮಯವೆನುತ ||
ಅರಿತು ನಿದ್ರಿಸುತುದಯಕಾಹ್ನಿಕಂಗಳ ಗೈದು |
ಭರದಿ ಸಭೆಗೈದಲೆದ್ದೆರಗುತುಪಚರಿಸಿ ಸಂ |
ಗರಕೆ ಪಟ್ಟವನೆಸಗಿದನು ನೃಪತಿ ವಾದ್ಯ ಭೂಸುರಮಂತ್ರಘೋಷದಿಂದ || ೬೮ ||

**ಮಾರವಿ - ಏಕ**
ಪರಿಕಿಸಿ ಕೋಪದೊ | ಳರ್ಕಜ ಕೌರವ |
ರರಸನನೀಕ್ಷಿಸುತ ||
ಧುರವಿಕ್ರಮರಾ | ವಿರುತಿರೆ ಕುರುದಳ |
ದರಸನೆ ನದಿಜಾತ || ೬೯ ||
ಜರೆಯಡಸಿದ ನೆರೆ | ನವಿರಿನ ಕಂಪಿತ |
ಸರುವಾಂಗದ ಪರಿಯ ||
ಅರಿಯಲಿವನು ಸಂ | ಗರದೊಳು ಪಿಡಿದೆಳ |
ತರುವನೆ ಜಯಸಿರಿಯ || ೭೦ ||
ದ್ವೇಷಗಳಿರೆ ನೀ | ಘಾಸಿಪುದೊಳ್ಳಿತು |
ದೋಷಗಳರಿಶರಕೆ ||
ಮೀಸಲು ಗೈಯ್ಯುವು | ದೆನೆ ಗಂಗಾಸುತ |
ರೋಷದೊಳಾಕ್ಷಣಕೆ || ೭೧ ||

**ಭೈರವಿ - ಅಷ್ಟ**
ಬಗುಳದಿರೆಲವೊ ನೀನು | ಕುಲವನು ನಾ |
ಲಿಗೆ ತಿಳುಹುವದಿನ್ನೇನು ||
ನಗಧರ ಹರ ಬೊಮ್ಮ | ರುಗಳಡಹಾಯ್ದರು |
ಜಗಳದಿ ಗೆಲುವೆ ನಾನು|| ೭೨ ||
ಕೊಳುಗುಳದೊಳು ಭೂಪರ | ನಿತ್ಯದಿ ಶಿರ |
ವಿಳುಹುವೆ ದಶಸಾವಿರ ||
ನಳಿನನಾಭನ ಕರ | ದೊಳು ಚಕ್ರವಿಡಿಸುವೆ |
ತೊಲಗೆನೆ ರವಿಕುವರ || ೭೩ ||

ಧುರದಿ ನೀ ಗೆಲಿದರಾನು | ಸನ್ಯಾಸವ |
ಧರಿಸಿ ವನಕೆ ಪೋಪೆನು ||
ಮರಣವಾದರೆ ಕಾದಿ | ಗೆಲುವೆ ವೈರಿಗಳನ |
ಕರ ಚಾಪವಿಡೆಯೆನಿನ್ನು || ೭೪ ||

**ವಾರ್ಧಕ**

ಎಂದು ಕೋಪದಿ ಕರ್ಣನೈದೆ ವಿಕ್ರಮದಿ ನದಿ |
ಕಂದನೊದರಿಸಿ ಧನುವ ಸ್ಯಂದನವನೇರಿ ಬಲ |
ಸಂದಣಿಸಿ ಕುರುಕ್ಷೇತ್ರಕೈದಿ ಡೇರೆಯನಿಕ್ಕುತಂಧಕಾತ್ಮಜರು ಸಹಿತ ||
ನಿಂದು ಕಾಳಗಕೆ ರಣದುಂದುಭಿಯ ಮೊಳಗಿ ಯಮ |
ನಂದನನ ಬಳಿಗಟ್ಟಿದನು ಚರರ್ ತಿಳುಹೆ ಧುರ |
ಕೆಂದು ದಳವೆರದು ತಮ್ಮಂದಿರೊಡನವನಿಪಂ ಮಂದರಾಧರ ನೇಮದಿ || ೭೫ ||

**ಮಾರವಿ - ಏಕ**

ಮುಂದುವರಿಯೆ ರಣ | ದುಂದುಭಿ ಮೊಳಗೆ ವ |
ಸುಂಧರೆಯದರಲಿಕೆ ||
ಚಂದದಿ ಶಂಖವ | ನೊದರಿಸಿ ಹರಿ ನರ |
ಗೆಂದನು ತತುಕ್ಷಣಕೆ || ೭೬ ||
ಏರು ರಥವ ಹಿಡಿ | ಕಾರ್ಮುಕವೆನೆ ಮಣಿ |
ದೇರಿಗೆ ಬಲವಂದು||
ಭೋರನೆ ಹರಿಪದ | ವಾರಿಜಕೆರಗುತ |
ಲೇರೆ ವಿಜಯನಂದು || ೭೭ ||
ಹಾರಿಸಿ ರಥವ ಮು | ರಾರಿಯುಭಯಬಲ |
ವಾರಿಧಿ ಮಧ್ಯದಲಿ ||
ತೇರ ನಿಲಿಸಿ ಕುರು | ವೀರರ ತೋರೆ ಬ |
ಲಾರಿಜ ಮೋಹದಲಿ || ೭೮ ||

**ಕೇದಾರಗೌಳ - ಝಂಪೆ**

ದಹಿಸಿ ಮೋಹಾಗ್ನಿಯಿಂದ | ಕಾಯದಲಿ |
ಬೆವರಿಡುತ ಹರಿಯೊಳೆಂದ ||
ಮಹಿಗಾಗಿ ಸ್ವಜನತತಿಯ | ಕೊಂದೆಸಗ |
ಬಹುದೆ ನಾ ಪಾಪಕೃತಿಯ || ೭೯ ||
ಮರುಳಾದೆಯೇನೊ ಪಾರ್ಥ | ಬಾಹುಜನ |
ಕರೆದು ರಣಕೊದಗುವಾತ ||
ಹಿರಿಯ ಕಿರಿಯನೆನುತ್ತಲಿ | ಬಿಡಲವನ |
ಧರಣಿ ಹೊರಳೇನ್ ಪೇಳಲಿ || ೮೦ ||
ನುಡಿಯಲೇಕೀ ಪಾಪವ | ಕಂಪಿಸುವ |
ದೊಡಲು ಪಿಡಿಯೆನು ಚಾಪವ ||
ಮಡುಹೆನೆಂದಿಗು ಹಿರಿಯರ | ಎನುತ ನರ |
ಪೊಡವಿಗುರುಳಲು ಮುರಹರ || ೮೧ ||

**ಶಂಕರಾಭರಣ - ತ್ರಿವುಡೆ**

ಇರುವನಾವವನಳಿವನಾವನು |
ಮರಣ ಜನುಮಾಡಿಂಬಕೆ ||
ಹೊರತು ನಿತ್ಯನು ಜೀವನೆಲ್ಲರೊ | ಳಿರುವನೋರ್ವ || ೮೨ ||
ಕುಲದ ಧರ್ಮವನೊಲಿದು ಸಾಧಿಸೆ |
ಸುಲಭದಿಂದಾ ಮುಕ್ತಿಯು ||
ಕೊಲುವ ಕಾವವ ತಾನೆ ತನ್ನಲಿ | ಹಲವದೈಕ್ಯ || ೮೩ ||

ಪರಿಕಿಸೆನ್ನಯ ನುಡಿಯಸತ್ಯವೊ |
ಖರೆಯೊ ನೀ ಪ್ರತ್ಯಕ್ಷದಿ ||
ಕರುಣಿಸುವೆನೆಂದೆನುತ ವಿಶ್ವವ | ಧರಿಸಿ ತೋರ್ದ || ೮೪ ||
ಕಂಡು ಭಕ್ತಿಯೊಳೆರಗಿ ನೀ ಹೊರ |
ತೊಂದ ಕಾಣೇ ಪದವನು ||
ಹೊಂದಿ ಧನ್ಯನು ನಡೆವೆನಾಜ್ಞೆಯೊ | ಳೆಂದ ನರನು || ೮೫ ||

**ಭಾಮಿನಿ**
ಇಂತೆನಲು ಹರಿ ಮುದದಿ ನಿಜರೂ |
ಪಂ ತಳೆಯೆ ನರನೇರ್ದು ರಥವ  ದಿ |
ಗಂತ ಬಿರಿವಂತೊದರಿಸಿದನೇನೆಂಬೆ ಚಾಪವನು ||
ಪಂಥದಲಿ ಹೊಯ್ದಾಡಿ ದಳವೆರ |
ಡೆಂಟು ದಿನದಲಿ ಜಯವ ಕಾಣದೆ |
ಅಂತರಂಗದಿ ಮರುಗಿ ಕೌರವ ಭೀಷ್ಮನೊಡನೆಂದ || ೮೬ ||

**ಭೈರವಿ - ಝಂಪೆ**
ತಾತ ನಮಗೆನುತ ದಳ | ವ್ರಾತದೊಡೆತನವಿತ್ತ |
ರೀತೆರದಿ ಕೊರಳರಿವು | ದೇತರದ ನ್ಯಾಯ || ೮೭ ||
ಮನವನಹಿತರೊಳಿಟ್ಟೆ | ಗುಣವನರಿಯದೆ ಕೆಟ್ಟೆ |
ಅನುವರದೊಳಮಿತಬಲ | ವನು ಬಲಿಯ ಕೊಟ್ಟೆ || ೮೮ ||
ಬೇಡ ಕೈ ಮುಗಿವೆ ದಯ | ಮಾಡಿ ರಣಕಪ್ಪಣೆಯ |
ನೀಡು ಕರ್ಣಗೆ ಜಯವ | ಸಾಧಿಸುವನೆನಲು || ೮೯ ||

**ಸೌರಾಷ್ಟ್ರ - ತ್ರಿವುಡೆ**
ಗಂಡನೊಬ್ಬನೆ ಸೂತಸುತ ಮಿಗೆ |
ಗಂಡರಿಲ್ಲೆಲೆ ನೃಪ ಜಗತ್ರಯ |
ಗಂಡನರ್ಜುನನಿದಿರು ನಿಲ್ಲುವ | ಗಂಡರಿಹರೆ || ೯೦ ||
ಅದರೊಳಾ ಲೋಕೈಕ ಗುರು ಹರಿ |
ಯೊದಗಿರಲು ಬಣ್ಣಿಸುವದೇನಿದೆ |
ಚದುರ ಕೇಳಾದರೆಯು ನಾನಾ | ಡಿದುದ ಬಿಡದೆ || ೯೧ ||
ಕಡಿದೆ ದಿನತೆರನಯುತ  ಸಂಖ್ಯೆಯ |
ಪೊಡವಿಪಾಲರನಿಂದು ಚಕ್ರವ |
ಜಡಜನಾಭನ ಕರದಿ ಪಿಡಿಸದೆ | ಬಿಡುವನಲ್ಲ || ೯೨ ||
ಎನುತ ರೋಷದೊಳೈದೆ ಪಾರ್ಥನ |
ಘನರಥವನಡಹಾಯ್ದು ಬರುತಿಹ |
ರಣಪರಾಕ್ರಮಗೆಂದ ನರ ನಸು | ಮುನಿಸಿನಿಂದ || ೯೩ ||

**ಶಂಕರಾಭರಣ - ಮಟ್ಟೆ**
ತರಳರೆಂಬ ಕರುಣವೆಲ್ಲ |
ಕುರುನೃಪಾಲಗಾಯ್ತು ನಮ್ಮ |
ಕೊರಳನರಿಯ ಬಂದೆ ಕುಲದಿ | ಹಿರಿಯನಾಗಿಹೆ || ೯೪ ||
ಕರುಣವಿರಲಿ ಪೋಗಲಿನ್ನು |
ಹಿರಿಯನೆಂಬ ಭಾವವಿರಲು |
ಧರಿಸಿದ್ಯಾಕೆ ಚಾಪಶರವ | ಕರದೊಳೆಂದನು || ೯೫ ||
ಜಾತಿಧರ್ಮವೆಮ್ಮ ಸಮರ |
ಕಾಂತ ಭಟನನಿರಿವುದಿಂದು |
ತಾತ ನಿನ್ನ ಗೆಲಿದು ಜಗದಿ | ಕೀರ್ತಿ ಪಡೆವೆನು || ೯೬ ||

ಪಾರ್ಥ ಗೆಲಿದಡೆನ್ನ ನಾ ಕೃ |
ತಾರ್ಥನಹೆನು ಮರುಳೆ ನಿನ್ನ |
ಸತ್ವವಡಗಿಸುವೆನು ನಿಮಿಷ | ಮಾತ್ರಕೆಂದನು || ೯೭ ||
ಹುಟ್ಟಿದೊಡನೆ ಶಿರವ ಜಿಗುಟ |
ದಿಷ್ಟು ಬೆಳಸುತೆಮ್ಮ ರಣದಿ |
ಕುಟ್ಟಿಕಳೆವುದೀಗ ನಿನಗೆ | ಕಷ್ಟವೆಂದನು || ೯೮ ||
ಕುರುಮೃಗೇಂದ್ರಪೀಠಸೇವೆ |
ಗಿರುವೆನಾದಿಯಿಂದಲೆಮ್ಮ |
ತರಳರಾದರೇನು ವಿಧಿಯ | ಬರಹವೆಂದನು || ೯೯ ||
ಸೇವೆಗೆನುತ ಬಂದು ಪಿಡಿದು |
ಗೋವುಗಳ ವಿರಾಟ ಪುರದಿ |
ಯಾವ ಕಡೆಗೆ ಪೋದೆ ರಣದಿ | ಸೋವನರುಹಿಸು || ೧೦೦ ||
ಗೆಲಿದ ಬಲುಹ ತೋರ್ಪೆನೊಂದು |
ಘಳಿಗೆ ತಾಳೆನುತ್ತಲಸ್ತ್ರ |
ಮಳೆಯ ಸುರಿದನೇನನೆಂಬೆ | ಮುಳಿದು ಭೀಷ್ಮನು || ೮ || ೧೦೧ ||

**ವಾರ್ಧಕ**
ಕೆರಳಿ ಗಾಂಗೇಯ ಸುರಿದಸ್ತ್ರ ಸಂಕುಲವ ನರ |
ಪರಿಹರಿಸಲೀಕ್ಷಿಸುತಲುರಗಾಸ್ತ್ರವಂ ಬಿಡಲ್ |
ಗರುಡಾಸ್ತ್ರದಿಂ ಮುರಿಯೆ ತಿಮಿರಾಸ್ತ್ರವೆಸೆಯಲದ ಸೂರ್ಯಾಸ್ತ್ರದಿಂ ಗೆಲಿದನು ||
ಉರಿಮಸಗಿ ಭೀಷ್ಮನಿಡಲೈಂದ್ರಾಸ್ತ್ರವಂ ಪಾರ್ಥ |
ತರಿದಿಡುಕೆ ವೈಷ್ಣವಾಸ್ತ್ರದಿ  ಕಂಡು ಬ್ರಹ್ಮಾಸ್ತ್ರ |
ಭರದೊಳೆಸಲದಕೆ ಪ್ರತಿ ಸರಸಿಜಭವಾಸ್ತ್ರವಂ ತಿರುಹಿಡುತ ಬೊಬ್ಬಿರಿಯಲು || ೧೦೨ ||

**ಭಾಮಿನಿ**
ಪೋರ ನೀನೀಗೆನ್ನ ಶಸ್ತ್ರದ |
ಸಾರವನು ಬರಿಗೈದೆ ಸೂತನ |
ಭೂರಿ ವಿಕ್ರಮವೈಸೆ ಮುರಿಯುವೆನದರ  ನೋಡೆನುತ ||
ಘೋರಶಕ್ತಿಯೊಳೆಚ್ಚು ರಥವನು |
ಹಾರಿಸುತಲಸಿರತ್ನಬಾಣದಿ |
ವಾರಿಜಾಂಬಕನೊಸಲ ಭೇದಿಸೆ ಕೃಷ್ಣ ಖಾತಿಯಲಿ || ೧೦೩ ||

**ಸೌರಾಷ್ಟ್ರ - ತ್ರಿವುಡೆ**
ಕೆರಳಿ ವಿಲಯದ ರುದ್ರನೆನೆ ಹುಂ |
ಕರಿಸುತವನಿಗೆ ಪುಟನೆಗೆದು ಸಿರಿ |
ಕರದಿ ರಕ್ತವನೊರಸುತೊಡನಂ | ಬುರುಹನಾಭ || ೧೦೪ ||
ಸ್ಮರಿಸಿ ಚಕ್ರವ ಕರದಿ ಕೊಂಡದ |
ತಿರುಹಿ ದುರುಳನಿಗಿಡುವೆನೆನುತಿರೆ |
ತರಹರಿಸಿತೇನೆಂಬೆ ತ್ರೈಜಗ | ಹರಿಯ ಖತಿಗೆ || ೧೦೫ ||
ನೋಡಿ ಗಂಗಾತರಳನಭಯವ |
ನೀಡಿ ಸೇನೆಯ ನಿಲಿಸಿ ಕರಗಳ |
ಜೋಡಿಸುತಲಬುಜೋದರನ ಕೊಂ | ಡಾಡುತೆಂದ || ೧೦೬ ||

**ಸಾರಂಗ - ಅಷ್ಟ**
ಸ್ವಾಮಿ ಚಿತ್ತೈಸು ಬಿನ್ನಪವ | ಮನ್ನಿ | 
ಸೀ ಮುದ್ದುಸುತನ ದುಷ್ಕೃತವ || ಪ ||
ಮಾಮನೋಹರ ದೇವ ದೇವ | ಖಳ |
ಹೋಮ ಸದ್ಭಕ್ತ ಸಂಜೀವ ||
ಕಾಮಾರಿಮಿತ್ರ ಪಿತಾಮಹಜನಕಾರ್ಕ |
ಸೋಮ ನಯನ ವಿಶ್ವ | ಪ್ರೇಮ ಪರಾಕು || ೧೦೭ ||
ನಿನ್ನಿಂದಲಜರುದ್ರಾಮರರು | ಹರಿ |
ನಿನ್ನಿಂದ ನರ ನಾಗಾಸುರರು ||
ನಿನ್ನಿಂದುದಿಸಿ ಸರ್ವ ನಿನ್ನೊಳೈಕ್ಯವು ದೇವ |
ನಿನ್ನ ಹೊರತು ಕಾಣೆ | ನಿನ್ನ ನಂಬಿದೆ ತಾನೆ || ಸ್ವಾಮಿ || ೧೦೮ ||
ಆದರಾಲಿಪುದೆನ್ನ ಸೊಲ್ಲ | ಮೃತ |
ನಾದರೆ ಭಜಕ ತಾನಲ್ಲ ||
ಆಡಿದ ನುಡಿ ಸಂತು ಬೇಡವೆಂದೆನಲೆಂತು |
ಆದಿಮೂರುತಿ ಚಿತ್ತ | ವಾದರೆ ಬಿಡು ಚಕ್ರ || ಸ್ವಾಮಿ || ೧೦೯ ||

**ಭಾಮಿನಿ**
ವರಬಲದೊಳಿವನಳಿಯನನ್ಯರೊ |
ಳಿರಿವುದನುಚಿತವೆನುತ ಶ್ರೀಹರಿ |
ಅರಿತು ತಿರುಗುವ ವೇಳ್ಯದಲಿ ಬಂದೆರಗಿ ನರ ನುಡಿದ ||
ಕರುಣವಿರಿಸೆನು ಸರುವಥಾ ಸಂ |
ಗರದೊಳುರುಹುವೆನಹಿತರನು ದಯ |
ವಿರಿಸಿ ರಥವೇರೆನುತಲಿರೆ ರವಿ ಸರಿದ ಪಶ್ಚಿಮಕೆ || ೧೧೦ ||

**ಭೈರವಿ - ಝಂಪೆ**
ಶಿಬಿರಕೈದಲು ಬಲಗ | ಳೆರಡು ಮರುಕದಿ ಯಮಜ |
ನಬುಜಾಕ್ಷನೆಡೆಗೈದು | ತಭಿನಮಿಸುತೆಂದ || ೧೧೧ ||
ಅಳಿದವಮಿತ  ಬಲಂಗ | ಳುಳಿವ ಪಾಡಿಲ್ಲೆಮಗೆ |
ಮುಳಿದ ಭೀಷ್ಮನ ಗೆಲುವ  | ಕಲಿಯಾರೀ ಜಗದಿ || ೧೧೨ ||
ಮನುಜರಿನಿಬರ ಕೊಂದು | ಜನಪನೆನಿಸುವ ಮನಗ |
ಳೆನಗಿಲ್ಲ ಕೈಮುಗಿವೆ | ವನವೆ ಸುಖವೆಂದ || ೧೧೩ ||

**ಕಾಪಿ - ಅಷ್ಟ**
ಕಾಲನಂದನ ಕೇಳು ಮಾತ | ಪೋಗಿ |
ಕಾಲಿಗೆರಗಿ ಬೇಡಿಕೊಳಲು ಮುತ್ತಾತ ||
ಪಾಲಿಪನಡವಿಗಪ್ಪಣೆಯ | ಬೇ |
ಗೇಳಿರೀನಿಶಿಯೊಳೆನ್ನುತ ಲಕ್ಷ್ಮೀನಿಲಯ || ೧೧೪ ||
ತಡವ ಮಾಡದಿರೆಂದೈವರನು | ಕೂಡಿ |
ನಡುನಿಶಿಯೊಳು ನಡೆದನು ಮುರಹರನು ||
ಬಿಡದಿಯ ದ್ವಾರಕೈತರಲು  | ಅಡಿ |
ಗೆಡೆದು ಭೀಷ್ಮಗೆ ಚರರಿದ ತಿಳುಹಿಸಲು || ೧೧೫ ||

**ಭಾಮಿನಿ**
ಪೃಥೆಯ ಸುತರೈತಂದರೇ ಕುರು |
ಪತಿಗೆ ಮರಣವ ತಂದರೇ ಗ್ರಹ |
ಗತಿಯೆನುತ ಶಿರ ವಲದು ದೇವವ್ರತನು ಚಿಂತೆಯಲಿ ||
ಮತಿಯುತರ ಕಳುಹೆನಲು ಬಳಿಕಾ |
ಶತದಳಾಂಬಕ ಪಾಂಡುಪುತ್ರರ |
ಜತೆಯೊಳೈತರೆ ಭೀಷ್ಮನೆರಗಿದನೆದ್ದು ಹರಿಪದಕೆ || ೧೧೬ ||

**ಕೇದಾರಗೌಳ - ಅಷ್ಟ**
ಸುರುಚಿರಾಸನವಿತ್ತು | ಮನ್ನಿಸುತಿರೆ ನದಿ |
ತರಳನ ಕರವಿಡಿದು ||
ಸಿರಿಮನೋಹರ ಕುಳ್ಳಿ | ರಿಸುತ ಪಾದಕೆ ಕೌಂತೇ |
ಯರ ಕೆಡಹಿದನೊಲಿದು || ೧೧೭ ||
ಹಳುವದೊಳಿರೆ ತಂದು | ಸಲಹಿದಾತನು ನೀನು |
ತಲೆಗಾಯಬೇಕೀಗೆಂದು ||
ನಳಿನಾಕ್ಷನುಸುರಲೈ | ವರನೆತ್ತಿ ನದಿಸುತ |
ನೊಲಿದೆಂದ ಯಮಜಗಂದು || ೧೧೮ ||
ದುಗುಡವೇನೆಲೊ ಕಂದ | ಹಗೆಯಾಗಿ ತಾನೀಗ |
ಜಗಳಕೆ ನಿಂತಿಹೆನು ||
ಮಗುಳೆರಗುವದನು | ಚಿತ ಮನದಿರವ ಹಿಂ |
ದೆಗೆಯದೆ ಪೇಳೆಂದನು || ೧೧೯ ||

**ನವರೋಜು - ಏಕ**
ಕರುಣದಿ ಲಾಲಿಸು ಮಾತ | ನಾ |
ವಿರಿದುದ ಮನ್ನಿಸು ತಾತಾ ||
ತೆರಳುವೆ ವಿಪಿನಕೆ | ತರಳರೊಡನೆ ದಯ |
ವಿರಲೆಂದೆರಗಿದ | ಚರಣದಿ ಯಮಜ || ೧೨೦ ||
ಮರುಗದಿರೇಳೈ ಕಂದ | ಮನ |
ಕರಗಿಪರೇನಿದು ಚಂದ ||
ತರಿದಹಿತರ ಕುರು | ಧರೆಯಾಳದೆ ವನ |
ಸ್ಮರಿಸಲಿನಿತು ಮುನಿ | ತರಳನೆ ನೀನು || ೧೨೧ ||
ನೃಪಸುತನಾಗಿರಲೇನು | ಪಣೆ |
ಲಿಪಿಯಾ ಮೀರುವನೇನು ||
ಕೃಪೆಗೈವವರತಿ | ಕುಪಿತರಾದರೆ ವಿಧಿ |
ಯಪಕೃತವಲ್ಲದೆ | ರಿಪುಗಳೊಳೇನಿದೆ || ೧೨೨ ||

**ಭಾಮಿನಿ**
ತರಳಕೇಳಾನಿರೆನು ನಾಳಿನ |
ಧುರದಿ ಪಾರ್ಥ ಶಿಖಂಡಿಯನು ಮುಂ |
ದಿರಿಸುತಸ್ತ್ರವನೆಸೆಯೆ ತೊರೆವೆನು ರಣವನಾ ಬಳಿಕ ||
ಕುರುಬಲವ ಗೆಲಿದಿಳೆಯನಾಳೆಂ |
ದಿರದೆ ಹರಸುತ ಕಳುಹಲೈವರು |
ಹರಿಸಹಿತ ನಡೆತಂದು ಹರುಷದಿ ಕಳೆದರಾ ನಿಶಿಯ || ೧೨೩ ||

**ವಾರ್ಧಕ**
ಸುರನದೀಸುತನೆಂದ ತೆರದಿ ಶರತಲ್ಪದೊಳ್ |
ಹರಿಯೊಲುಮೆಯಿಂದ ಮರುದಿನದೊಳೊರಗಿಸಿ ಪಾಂಡು |
ತರಳರಿರುತಿರಲತ್ತ ಕುರುಚತುರ್ಬಲದರಸುತನವಾಯ್ತು ದ್ರೋಣನಿಂಗೆ ||
ಧುರದಿ ಹಳುಚುತ ದಿವಸವೆರಡು ಸರಿದುದು ಜಯವ |
ಸ್ಮರಿಸಿ ಕಲಶಜ ವಿಗಡ ಚಕ್ರವ್ಯೂಹವ ಗೈದು |
ನರನ ಸಮಸಪ್ತಕರ ಸಮರಕೈದಿಸಿ ದ್ವಾರಕಿರಿಸಿದಂ ಸಿಂಧು ನೃಪನ || ೧೨೪ ||

**ಕೇದಾರಗೌಳ - ಅಷ್ಟ**
ಗರುಡಿಯಾಚಾರ್ಯ ದೂ | ತರೊಳೆಂದನಂತಕ |
ತರಳನ ಬಳಿಗೆ ಪೋಗಿ ||
ಹರನಿಗಭೇದ್ಯವಾ | ಗಿಹ ಚಕ್ರವ್ಯೂಹದ |
ಪರಿಯ ಪೇಳಿರಿ ಲೇಸಾಗಿ || ೧೨೫ ||

ಎಂದಿನ ಪರಿಯೀಗ | ನಂದಗೋಪಜ ತಾಗ |
ನಿಂದುಧರನ ಬಲಕೆ ||
ಹೊಂದಿಸಿಕೊಳಲಿದು | ಹಿಂದಿನ ದಿನವಲ್ಲ |
ಬಂದೆನ್ನ ತಾಗಲಿಕೆ || ೧೨೬ ||
ಮೋಸದಿ ಭೀಷ್ಮನ | ಘಾಸಿಮಾಡಿದುದೆಮ್ಮ |
ಳೀಸೊಂದು ನಡೆಯದೆಂದು ||
ಲೇಸಿನೋಳ್ಸೈತಹು | ದೆನೆ ಪದಕೆರಗುತ್ತ |
ತೋಷದೊಳವರು ಬಂದು || ೧೨೭ ||
ಎರಗಿ ಧರ್ಮಜಗಿದ | ನರುಹಿ ಪೋಗಲು ಯಮ |
ತರಳ ಚಿಂತಿಸಿ ಮನದಿ ||
ಮುರಿವ ಸಾಹಸಿಗಳ | ರ್ಜುನ ಹರಿ ಹಲಧರ |
ನರಪುತ್ರರೀಜಗದಿ || ೧೨೮ ||
ದೈತ್ಯರ ಧುರಕೆ ಸ | ಮರ್ಥನರ್ಜುನ ಪೋದ |
ಮತ್ತೆ ಶ್ರೀಹರಿ ಸಹಿತ ||
ಪುತ್ರನ ಕಳುಹುವ | ದೆತ್ತಣ ನೀತಿಯೆ |
ನುತ್ತ ಧರ್ಮಜನಳುತ || ೧೨೯ ||

**ಭಾಮಿನಿ**
ಧುರಕೆ ತೆರಳುವರಿಲ್ಲವೆನುತಲಿ |
ಮರುಗುತಿರೆ ಯಮಜಾತನಿತ್ತಲು |
ನರ ನಸುತ ನಿಜ ಸತಿಯ ಸಮ್ಮೇಳನದೊಳಿರುತಿರಲು ||
ಸರಸ ಸವಿನುಡಿಯಾಟಪಾಟದಿ |
ಮೆರೆದಿರಲು ದಂಪತಿಗಳೀರ್ವರು |
ಬರಸೆಳೆದು ಬಿಗಿದಪ್ಪಿ ಕಾಂತನೊಳೊರೆದಳುತ್ತರೆಯು || ೧೩೦ ||

**ಮೋಹನ ತೋಡಿ - ಆದಿ**
ನೀರ ನೀ ಲಾಲಿಸೆನ್ನ | ನುಡಿಯ ಪ್ರೇಮ |
ವಾರಿಧಿಹಿಮಕಿರಣ || ಪ ||
ಮಾರ ಸನ್ನಿಭ ಚದುರ | ತವ ಸಿರಿ ಚರ |
ಣಾರವಿಂದವನಿದರ ||
ವೋರಂತೆ ಸೇವಿಸಿ | ಕಾರುಣ್ಯಜಲವೀಸಿ ||
ಸಾರಸುಖವ ಮನ | ಸಾರೆ ಪಡೆಯೆ ಕ್ಷಣ |
ದೋರದನುವು ಬಾಳ್ | ಮೂರು ದಿನಗಳು || ನೀರ || ೧೩೧ ||
ಅಗಲಿ ಜೀವಿಸಲಾರೆ | ನಿತ್ಯದಿ ಹಾಳು |
ಹಗರಣವದು ಬೇರೆ ||
ಜಗಳಕೈದಲು ದಿನ | ಯುಗವಾಗಿ ಕಳೆವೆ ನಾ ||
ಸುಗುಣ ನಿನ್ನ ಮನ | ಬಿಗುಹೆಂತುಟೊ ಕ್ಷಣ |
ವಗಲದೆನ್ನ  ಘನ | ದುಗುಡ ನಿವಾರಿಸು || ನೀರ  || ೧೩೨ ||
ಸಿಕ್ಕಿದೆನೆಲೆ ಕೋಮಲೆ | ಮೋಹದ ಘನ |
ಚಕ್ರವ್ಯೂಹದಿ ವಿಮಲೆ ||
ಮುಕ್ಕಣ್ಣ ವಿಧಿ ಕಮ | ಲಾಕ್ಷ ಶಕ್ರಾದ್ಯಮ |
ರರ್ಕಳಿಗಿದ  ಮುರಿ | ದಿಕ್ಕಲರಿದು ಬರಿ |
ಠಕ್ಕಲ್ಲಿದು ಪಿರಿ | ದಕ್ಕರವೆಂಬುದು || ನೀರ || ೧೩೩ ||

**ಭಾಮಿನಿ**
ಇಂತು ದಂಪತಿಗಳು ವಿನೋದ ಮ |
ಹಾಂತಕೇಳಿಯೊಳಿರಲು ಚರ ಬಂ |
ದಂತಕಾಂತಕಗರಿದು ದ್ರೋಣನ ಚಕ್ರವ್ಯೂಹವದು ||
ಹೊಂತಕಾರಿಗಳೆಲ್ಲ ಸಮರದಿ |
ಹಿಂತೆಗೆದರೆನಲುಬ್ಬಿ ಕದನಕ್ಕೆ |
ತಾಂತ ಭೈರವನೇಳಲಾತನ ತಡೆದಳುತ್ತರೆಯು || ೧೩೪ ||

**ಕಾಂಬೋಧಿ - ಏಕ**
ಹಿತವಿದಲ್ಲ ಪೋಪುದಿಂದು | ಪ್ರಾಣಕಾಂತ || ಪ್ರಿಯ |
ಸತಿಯ ಮೊರೆಯ ಕೇಳು ದಯದಿ | ಪ್ರಾಣಕಾಂತ || ೧೩೫ ||

**ಸುರುಟಿ - ಏಕ**
ದುಃಖಿಪರೇನೆಲೆಗೆ | ಮಾಲೆಯ |
ನಿಕ್ಕಿದೆ ವೀರನಿಗೆ ||
ಘಕ್ಕನೆ ರಿಪುಗಳ | ಸೊಕ್ಕ ಮುರಿದು ಬಹೆ |
ಕಕ್ಕುಲತೆಯ ತೆಗೆ | ಮಿಕ್ಕ ನಾರಿಯರೊಲು || ೧೩೬ ||

**ಕಾಂಬೋಧಿ - ಏಕ**
ವಿಗಡರನಿಬರಿರಲು ಬಲದಿ | ಪ್ರಾಣಕಾಂತ || ನೀನೆ |
ಜಗಳಕೈವುದೆಂಬುದೇನು | ಪ್ರಾಣಕಾಂತ || ೧೩೭ ||

**ಸುರುಟಿ - ಏಕ**
ರಕ್ಕಸರಾಹವಕೆ | ತಾತನ |
ಸಿಕ್ಕಿಸುತನುವರಕೆ ||
ವಕ್ಕಣಿಸಿದ ಗಡ | ಚಕ್ರವ್ಯೂಹವ ಪೊಗ |
ಲಿಕ್ಕರಿಯರು ದಿಟ | ಮಿಕ್ಕ ಸುಭಟರು || ೧೩೮ ||

**ಕಾಂಬೋಧಿ - ಏಕ**
ಸಿಡಿಲು ಬಡಿದಂತಹುದು ಮನಕೆ | ಪ್ರಾಣಕಾಂತ || ಪೋಗಿ |
ಒಡಲ ನೀಗದೆನ್ನ ಸಲಹೊ | ಪ್ರಾಣಕಾಂತ || ೧೩೯ ||

**ಸುರುಟಿ - ಏಕ**
ಅಳಲದಿರೆನ್ನಾಣೆ | ರಿಪು ಸಂ |
ಕುಲವ ಬಡಿವೆ ಜಾಣೆ ||
ಅಳುಕದೆ ದ್ರೋಣನ | ಬಲುಹ ಮುರಿದು ರಣ |
ಕಲಿಗಳ ಗೆಲಿದರೆ | ಘಳಿಗೆಯೊಳೈತಹೆ || ೧೪೦ ||

**ಕಾಂಬೋಧಿ - ಏಕ**
ಕದನಕಿಂದು ಬಿಡೆನು ನಿನ್ನ | ಪ್ರಾಣಕಾಂತ || ಮೀರಿ |
ನಡೆಯಲಸುವ ತೊರವೆನೆನ್ನ | ಪ್ರಾಣಕಾಂತ || ೧೪೧ ||

**ಭಾಮಿನಿ**
ಕಾಯ ಶಾಶ್ವತವಲ್ಲ ಕೀರ್ತಿಯ |
ಛಾಯವಾಚಂದ್ರಾರ್ಕವಿಹುದೆಲೆ |
ತೋಯಜಾಂಬಕಿ ನಿನ್ನೊಳಹುದೆಮ್ಮನ್ವಯಾಂಕುರವು ||
ನೋಯದಿರು ಮಗುಳೆನುತ ಬೋಧಿಸಿ |
ಪ್ರೀಯದಿಂ ಕಂಬನಿಯೊರಸೆ ಪತಿ |
ರಾಯನಿಗೆ ಬಲವಂದು ರತುನಾರತಿಯ ಬೆಳಗಿದಳು || ೧೪೨ ||

**ಸೌರಾಷ್ಟ್ರ - ತ್ರಿವುಡೆ**

ಸತಿಯ ಸೇಸೆಯ ಕೊಂಡು ಪಾರ್ಥನ |
ಸುತನು ಮಣಿರಥವೇರಿ  ನಡೆತಂ |
ದತಿ ಜವದಿ ಪೊಡಮಟ್ಟು ಧರ್ಮಜ | ಗತುಲಬಲನು || ೧೪೩ ||
ತಾತ ತೆಗೆ ತೆಗೆ ಚಿಂತೆ ಕೌರವ |
ವ್ರಾತವನು ಸದೆಬಡಿದು  ಕೊಡಸಂ |
ಜಾತನುರುಬೆಯ ನಿಲಿಸುವೆನು ಕ್ಷಣ | ಮಾತ್ರದೊಳಗೆ || ೧೪೪ ||
ಸೂರೆಗೊಂಬೆನು ದುರ್ಗವನು ದಯ |
ದೋರಿ ನೇಮವ ಕರುಣಿಸೆನುವ ಕು |
ಮಾರಕನ ತೆಗೆದಪ್ಪಿ ಮರುಗುತ | ಧಾರಿಣೀಂದ್ರ || ೧೪೫ ||

**ಶಂಕರಾಭರಣ - ಏಕ**

ಭೀಮಸಹಸರಳುಕಿದಾ ಸಂ | ಗ್ರಾಮಕಿದಿರೆ ತರಳ ||
ನೇಮಿಸಲೆಂತಕಟ ತಾನಿ | ಸ್ಸೀಮಯೆಳೆ ಕರುಳ || ೧೪೬ ||

**ಭಾಮಿನಿ**

ಶಿಶುವಿನೆಸುಗೆಯ ತಾಳಲಾಪರೆ |
ಶಶಿಧರಬ್ರಹ್ಮಾಮರಾಧಿಪ |
ಬಿಸಜ ಲೋಚನಮುಖ್ಯರೀ ಕುರುಪಶುಗಳಿಂದೇನು ||
ಜಸವಗೆಡಿಸುವೆ ನೋಡೆನುತ ಖತಿ |
ಮಸಗಿ ನಡೆದಾ ಚಕ್ರವ್ಯೂಹವ |
ನೆಸದು ಕೆಡಹೆ ಜಯದ್ರಥಾದ್ಯರ ಕಂಡನಾ ದ್ರೋಣ || ೧೪೭ ||

**ಭೈರವಿ - ಏಕ**

ಎಲ ಎಲ ಹಸುಳೆಯಿದೇನು | ರಣ |
ಬಲಿಯಾಗದೆ ನಡೆ ನೀನು ||
ಕಲಿತನಕೆಮಗತಿ ಕುಂದು |
ಶಿರವಿಳುಹಲು ಬಾಲನನಿಂದು || ೧೪೮ ||
ವರತಪದೊಳಗಿಹ ಯತಿಯ | ನಿಜ |
ತರಳನು ನಿನ್ನಯ ಸ್ಥಿತಿಯ ||
ಪರಿಕಿಸೆ ಹೇಸಿಗೆ ಧರೆಗೆ | ವನ |
ಚರಿಪ ಕಿರಾತರ ಪರಿಗೆ || ೧೪೯ ||
ಧರಣಿಯಮರ ನಾನಹುದು | ಶರ |
ಧರಿಸಲು ಕುಂದಕ ಬರದು ||
ತರಿದರೆ ಬಾಲನ ದುರಿತ | ಅದ |
ಕರುಹಿದೆ ನಡೆ ನರಜಾತ  || ೧೫೦ ||
ನೀತಿಯೊಳಿರಿದರೆ ದುರಿತ | ಬಹು |
ದೇತಕೆ ಸಮರದೊಳೆನುತ ||
ಘಾತಿಸುತೊಂದೇ ಶರದಿ | ಕೊಡ |
ಜಾತನ ಗೆಲಿದಬ್ಬರದಿ || ೧೫೧ ||

**ವಾರ್ಧಕ**

ಧುರದಿ ದ್ರೋಣನ ಗೆಲಿದು ದುಶ್ಶಾಸನುಗ್ರಮಂ |
ಪರಿಭವಿಸಿ ಕೃತವರ್ಮ ಕೃಪರುರುಬೆಯಂ ನಿಲಿಸಿ |
ಗುರುಸುತನ ಗರ್ವವನ್ನಿಳುಹಿ ಶಲ್ಯನ ಕೆಡಹಿ ತರಣಿಜನನಂದಗೆಡಿಸಿ ||
ಕುರುಬಲವನೆಲ್ಲ ನುಗ್ಗರೆದು ದುರ್ಗವ ಮುರಿದು |
ಶಿರವರಿದು  ಲಕ್ಷಣಾದ್ಯಣುಗರಂ ರಣಕಣದಿ |
ಧರೆಯನುರುಹುವ ಕಾಲರುದ್ರನಂದದಿ ಬೀದಿವರಿವ ಬಾಲನ ಕಾಣುತ || ೧೫೨ ||

**ಕಂದ ಪದ್ಯ**
ತರಳನ ಪೌರುಷವೆಂತುಟೊ ಯೆನುತಾ |
ಗುರು ನಾಸಾಗ್ರದಿ ಬೆರಳಿಡುತಂ ||
ತರಣಿಜನಂ ಹತ್ತಿರ ಕರೆದವನೊಡ |
ನರುಹಿದನತಿ ಗುಪಿತದೊಳಂ || ೧೫೩ ||

**ಬೇಗಡೆ - ಅಷ್ಟ**
ಆಲಿಸೈ ಗುಣಶೀಲ ರವಿಜಾತ | ಏನೆಂಬೆ ಕಲ್ಪದ |
ಶೂಲಿಯಂತಿಹನಿವನ ಗೆಲುವಾತ ||
ಪಾಳೆಯದೊಳಿಲ್ಲಮಮ ಬೆಂಗಡೆ |
ಕೋಲನೆಸೆದಿವ ಪಿಡಿದ ಚಾಪವ |
ಬೀಳುಗೆಡಹೆನಲಾಲಿಸುತ ದಿನ |
ಪಾಲಸಂಭವನೆಂದ ಮರುಗುತ || ೧೫೪ ||
ವೀರತಾನೆಂದೆನಿಸಿ ಕದನದಲಿ | ಹಿಂಗಡೆಗೆ ನಿಂತು ಕು |
ಮಾರಕನ ಧನುವೆಂತು ಖಂಡಿಸಲಿ ||
ಧೀರರಿನಿಬರು ಸೇರಿ ಸಮರದಿ |
ಪೋರನೋರ್ವನ ತರಿಯಲನುಚಿತ |
ಕ್ರೂರಕರ್ಮವ ಗೈವೆನೆಂತುಟೊ |
ಬಾರದೆನ್ನಯ ಕರವು ಶಿವ ಶಿವ || ೧೫೫ ||
ಸಲಹಿದಾತನ ಗೆಲುವಿಗೀತನುವ | ವಪ್ಪಿಸಿದ ಮೇಲೆಮ |
ಗುಳಿಯಲರಿದೈ ಕೀಳುಮೇಲೆನುವ ||
ಸಲೆ ವಿಚಾರವದೇಕೆ ಬಾಣದೊ |
ಳಿಳುಹು ಮೊದಲೀ ಪಾಪ ಪುಣ್ಯದ |
ಬಳಿಕೆ ನಮಗಿಲ್ಲೆನಲು ತಪನಜ |
ನಳುಕದೈದಿದ ಕೆಲಕೆ ತ್ವರಿತದಿ || ೧೫೬ ||

**ಭಾಮಿನಿ**
ವಸುಧೆಪತಿ ಕೇಳರ್ಕಜನ ಪಿಂ |
ದೆಸೆಗೆ ಕಳುಹಿಸಿ ದ್ರೋಣ ಮೊದಲಹ |
ಅಸಮಬಲ ಷಡ್ರಥಿಗಳೊಗ್ಗಿನೊಳಸ್ತ್ರಸಂಕುಲದಿ ||
ಮುಸುಕುಲದ ಪುಡಿಗೈದು ಪಾರ್ಥಜ |
ವಿಶಿಖಗಳ ತೂರುತಿರೆ ಬೆಂಗಡೆ |
ಗೆಸೆದು ಚಾಪವ ಕಡಿಯೆ ಕರ್ಣನ ಕಂಡನಭಿಮನ್ಯು || ೧೫೭ ||

**ಸೌರಾಷ್ಟ್ರ - ತ್ರಿವುಡೆ**
ಭಳಿರೆ ರವಿಸುತ ಚಾಪವಿದ್ಯೆಯ |
ತಿಳುಹಿದವನಾರಮಮ ಜಗದಲಿ |
ಕಲಿಯಹುದು ಮಝಭಾಪು ಸರಿಸದಿ | ಕಳವಿನೆಸುಗೆ || ೧೫೮ ||
ಹುಡುಗನುರುಬೆಗೆ ಬೆದರಿ ಹಿಂಗಡೆ |
ಗಡಗಿ ಕಡಿದೆಯ ಧನುವ ನಿನ್ನನು |
ಪೊಡವಿ ಹೊರಳತಿ ಪಾಪಿ ಮೆಚ್ಚಳು | ಮಡದಿಯೆಂದ || ೧೫೯ ||
ಕೇಳಿ ಲಜ್ಜೆಯೊಳಿನಜನೈದಲು |
ಆಲಿಯಲಿ ಕಿಡಿಸೂಸಿ ಪಾರ್ಥಜ |
ಬೀಳುಹೊಯ್ದನು ಗದೆಯೊಳಹಿತರ | ಮೂಲಬಲವ || ೧೬೦ ||

**ಭಾಮಿನಿ**
ಮಡಿದ ಸೇನೆಯ ಕಂಡು ರೋಷದಿ |
ಕೊಡನ ಸಂಭವ ಮುಖ್ಯ ಷಡುರಥ |
ರೊಡನೆ ದಿವ್ಯಾಸ್ತ್ರದಲಿ ಮುಸುಕಿದರಡಚಿಯೆಳೆ ಶಿಶುವ ||
ವುಡಿದವವನಿಗೆ ತೋಳು ಗದೆ ಸಹ |
ಝುಡಿಯೆ ಸರ್ವಾಂಗದಲಿ ರಿಪುಶರ |
ಪೊಡವಿಗುರುಳಿದನಮಲವಂಶಜ್ಯೋತಿ ಕೆಡೆದಂತೆ || ೧೬೧ ||

**ಶಂಕರಾಭರಣ - ತ್ರಿವುಡೆ**
ಕಾಣುತಿದನೈತಂದು ಕೌರವ |
ಏನಿದೇನನ್ಯಾಯದಿ ||
ಸೂನುವನು ಗೆಲಿದೆಮ್ಮ ಕುಲಕಪ | ಮಾನವಾಯ್ತು || ೧೬೨ ||
ಕುಲರತುನನಿವನಕಟ ಜಡಧಿಯ |
ಜಲವು ಕ್ಷಾರಾವೆನುತಲಿ ||
ತಳದೊಳಿಹ ಮೌಕ್ತಿಕವನೊಡೆವರೆ | ತಿಳಿದ ಜನರು || ೧೬೩ ||
ಪೌರುಷವ ಸುಡಲೆನುತವರ ಕ |
ಣ್ಣೀರಿನಿಂದಾ ಬಾಲನ ||
ವೀರ್ಯಕವನಿಪನೆರಗಿ ನಡೆದನು | ದಾರ ಮನದಿ || ೧೬೪ ||

**ಭಾಮಿನಿ**
ತರಳನಳಿವಿಗೆ ಮರುಗಿ ಧರ್ಮಜ |
ಗರವ ಸೇವಿಪೆನೆನುತಲಿರಲದ |
ನರಿತು ವೇದವ್ಯಾಸ ಬೋಧಿಸಿ ತೆರಳಲಸ್ತದಲಿ ||
ನರ ಗೆಲಿದು ಸಮಸಪ್ತಕರ ಹಿಂ |
ದಿರುಗುತಲೆ ದುಶ್ಶಕುನದಲಿ ತರ |
ಹರಿಸಿ ನಡೆತಂದರಸಗೆರಗುತ ನೋಡುತೆಡಬಲವ || ೧೬೫ ||

**ವಾರ್ಧಕ**
ಏನಿದೇನಗ್ರಭವ ಕಾಣುತಿರಲೀ ವಿಭವ |
ಭಾನುರಹಿತಾಕಾಶ ಬರದಿ ಬಳಲಿದ ದೇಶ |
ಏಣಾಂಕಗತ ರಜನಿ ಜಲಶೂನ್ಯ ನಿರ್ಝರಿಣಿ ಪತಿಹೀನ ಸತಿಯಾನನ ||
ಪ್ರಾಣನಿರ್ಗತ ದೇಹ ರಾಣಿವರ್ಜಿತ ಗೇಹ |
ಕಾಣಲರಿಯದ ನೋಟ ಲವಣವಿಲ್ಲದ ಊಟ |
ಕ್ಷೋಣೀಶ ಹತ ಪೊಳಲಿನಂತಿಹುದು ಮಗನೆಲ್ಲಿ ತಾನೆನುತ ಬಿಸುಸುಯ್ಯುತ || ೧೬೬ ||

**ಭಾಮಿನಿ**
ಧುರವಿಜಯರಿರಲೆನಿಬರಾಯಳೆ |
ಗರುವ ನೂಕಿದಿರಕಟ ವ್ಯಾಘ್ರನ |
ಝುರಿಗೆನುತ ಹೊರಳಿದನು ಘನಸಂತಾಪಭಾರದಲಿ ||
ಮರುಗುತೈತಂದಳು ಸುಭದ್ರಾ |
ತರುಣಿ ಕೃಷ್ಣಾರ್ಜುನರನೀಕ್ಷಿಸಿ |
ತರಳನ್ಯಾವೆಡೆ ತೋರಿರೆಂದಳಲಿದಳು ಸಭೆಯೊಳಗೆ || ೧೬೭ ||

**ನೀಲಾಂಬರಿ - ರೂಪಕ**
ಪ್ರಾಣಮನೋಹರ ನಿಮ್ಮಯ |
ಸೇನೆಯೊಳಬಲರನ್ಯಾರನು |
ಕಾಣೆನು ಹರ ಹರ ಮಗುಳೀ |
ಕ್ಷೋಣಿಯೊಳತಿ ಬಲರು || ೧೬೮ ||

ಮಾರಹರನ ನೀ ಗೆಲಿದವ |
ಭೂರಿಬಲನು ಮರುತಜನಿವ |
ಶೂರರು ಯಮಳರು ಜಗದಾ |
ಧಾರನೆನ್ನಗ್ರಜನು || ೧೯ ||
ಭೂತಳನಾಥ ಸುನೀತನ |
ಜಾತರಿಪುವು ಮಗುಳಿನಿತು ಬ |
ಲಾತಿಶಯರು ನೀವಿರುತಲ |
ನಾಥೆ ನಾನಾದೆನಲ || ೧೨೦ ||

**ಭಾಮಿನಿ**
ತುರುವ ಬಿಡು ತೆರಳಗ್ರಭವ ವನ |
ಚರಣೆ ಭೂವರಗೊಳಿತು ಪವನಜ |
ಗೆರಕ ಬಾಣಸಿನೂಳಿಗವು ಪಶುರಕ್ಷೆಗಶ್ವಿನಿಯ ||
ತರಳರಕ್ಕು ಶಿಖಂಡಿತನ ಪತಿ |
ಗಿರುವುದಹುದಿನ್ನೇಕೆ ಪೌರುಷ |
ಬರಿದೆ ನಿಮಗೆಂದೆನುತ ಹೊರಳಿದಳಳುತಲಿಂದುಮುಖಿ || ೧೨೧ ||

**ಸೌರಾಷ್ಟ್ರ - ತ್ರಿವುಡೆ**
ಮೃಡನ ವರದಲಿ ತಡವುತೆಮ್ಮನು |
ಹುಡುಗನನು ಮಡುಹಿದನು ಸೈಂಧವ |
ನುಡಿದು ಫಲವೇನೆಂದು ಮರುಗಿದ | ಪೊಡವಿಪತಿಯು || ೧೨೨ ||
ಕಿಡಿಗೆದರಿ ಕಲಿಪಾರ್ಥ ಕಲ್ಪದ |
ಕಡೆದಿನದ ಮೃಡನಂತೆ ಘರ್ಜಿಸಿ |
ಕಡು ದುರಾತ್ಮನ ಕೊಲುವೆ ನಾಳಿನ | ಕದನದೊಳಗೆ || ೧೨೩ ||
ಜಡಜಸಖನಸ್ತಮಿಸುವುದರೊಳು |
ಕಡಿವೆ ರಿಪು ಸೈಂಧವನ ತಪ್ಪಿದ |
ರಿಡುವೆನಗ್ನಿಗೆ ತನುವ ಶ್ರೀಹರಿ | ಯಡಿಗಳಾಣೆ || ೧೨೪ ||

**ಭಾಮಿನಿ**
ಭಾಪೆನುತ ಹರಿ ತಿಳುಹಿ ಭಗಿನಿಯ |
ತಾಪಗಳೆದುದಯದಲಿ ಹೊಕ್ಕರಿ |
ದಾ ಪದುಮವ್ಯೂಹದಲಿ ನಡುಸಾಯಾಹ್ನ ಪರಿಯಂತ ||
ರೂಪುಗಾಣದೆ ಖಲನ ಚಕ್ರದಿ |
ಮಾಪುರುಷನಡಗಿಸಿದ ರವಿಯನು |
ಶ್ರೀಪತಿಯ ಸಖನಗ್ನಿಗಿಳಿದಪೆನೆನುತಲನುವಾದ || ೧೨೫ ||

**ಮಧುಮಾಧವಿ - ತ್ರಿವುಡೆ**
ಕಂಡು ಕೆದರಿದ ಕಡು ನಗೆಯೊಳೈ |
ತಂದು ಸೈಂಧವನೆಂದ ಖರೆ ಖರೆ |
ಗಂಡುಗಲಿ ಮಝಬಾಪು ಭಾಷೆಯ|
ನೆಂದೆಯೊಳಿತೂ ಸಾಯಲು || ೧೨೬ ||
ನೋಯಲೇಕದಕಿನ್ನು ಬೇಗದಿ |
ಸಾಯಬಹುದೆನುತಿರಲು ಮುರಹರ |
ಸಾಯಕವ ತೊಡು ಜವದೊಳೆನೆ ನರ |
ಶ್ರೀಯರಸನೊಡನೆಂದನು || ೧೨೭ ||

**ಸುರುಟಿ - ಏಕ**
ನ್ಯಾಯವೆ ಕಂಸಾರಿ | ಘಳಿಗೆಯ |
ದಾಯಿತು ರವಿಜಾರಿ ||
ಸಾಯಕದೊಳು ಖಳ | ನಾಯುವ ಮುಗಿಸಲ |
ನ್ಯಾಯವೆಂದಮರರು | ನೋಯರೆ ಶಿವ ಶಿವ || ೧೭೮ ||
ಮತ್ತದಕೆಡರಿಲ್ಲ | ತೋರುವೆ |
ಸತ್ಯವ ಕಡೆಗೆಲ್ಲ ||
ಮಸ್ತಕವನು ಹೊಡೆ | ದೆತ್ತಿ ಪಿತನ ತೊಡೆ |
ಗಿತ್ತಪುದೆನೆ ನರ | ನೊತ್ತಿದನಸ್ತ್ರವ || ೧೭೯ ||

**ವಾರ್ಧಕ**
ಉರುಳೆ ಖಳ ಹರಿ ಸುದರ್ಶನವ ಪಿಂತೆಗೆಯೆ ರವಿ |
ಕಿರಣಮಂ ಕಂಡು ಕಡು ಬೆರಗುವಡೆ  ಬಲವೆರಡು |
ತೊರೆದನಸುವಾ ರಾತ್ರಿ ರಣದಿ ಹೈಡಿಂಬನುತ್ತರ ದಿವಸ ಬಿಲ್ಲೋಜನ ||
ಶಿರವರಿದು ಸಿರಿಯರಸನೊಲುಮೆಯಿಂ ಪಾಂಡುಸುತ |
ರಿರಲತ್ತ ಕುರುದಳದಿ ಕರ್ಣಗಾಯ್ತಭಿಷೇಕ |
ಧುರಕೊದಗುತಂದು ಜಯ ಬರದೆ ಮರುದಿನ ಶಲ್ಯಧರಣಿಪನ ಸೂತತ್ವದಿ || ೧೮೦ ||

**ಭಾಮಿನಿ**
ತರಣಿಸುತನುರವಣಿಸಲೊಂದೆಡೆ |
ಧುರವಿಜಯ  ದುಶ್ಶಾಸ ರಿಪು ಮೋ |
ಹರವ ಸವರುತ ನಡೆದ ಶೌರ್ಯದೊಳಪರಿಮಿತವಾಗಿ ||
ಪರಿಯ ಕಂಡಾ ಭೀಮ ಕಲ್ಪದ |
ಹರನ ರೌದ್ರವನಾಂತು ದುರುಳನ |
ಮುರಿದು ತಿಂಬೆನೆನುತ್ತ ಬೊಬ್ಬಿರಿದವನ  ತಡೆದೆಂದ || ೧೮೧ ||

**ಭೈರವಿ - ಅಷ್ಟ**
ಖಳ ದುಶ್ಶಾಸನನೆ ನೀನು | ಸತಿಯ ಮುಡಿ |
ಯೆಳೆದುಟ್ಟ ಸೀರೆಯನು ||
ಸುಲಿದು ನಮ್ಮೈವರ | ಹಳುವಕಟ್ಟಿದ ಗರ್ವ |
ವಿಳುಹುವೆ ಕ್ಷಣದಿ ನಾನು || ೧೮೨ ||
ತಿಂದು ನೀ ಬಕನ ಕೂಳ | ಆತನ ಕೊಂದ |
ಭಂಡನಧಿಕ ದುರುಳ ||
ಅಂಡಲೆವುತ ಮರೆ | ಗೊಂಡೆ ಬಾಣಸಿನೊಳು |
ಗಂಡು ನೀನಹುದು ಭಲ || ೧೮೩ ||
ದಂಡಿಸಿದೆನು ಖಳನ | ಮಾತೆಯು ತನ |
ಗೆಂದಿತ್ತುದುಂಡು ನಿನ್ನ ||
ಖಂಡಿಸುತಲಿ ಮಾಂಸ | ಖಂಡದಡಿಗೆ ಭೂತ |
ಪಿಂಡನುಣಿಪೆ ಜತನ || ೧೮೪ ||
ಬರಿ ಬಾಯ ಪೌರುಷದಿ | ವೀರನು ಅಜ |
ಗರಕಂಜಿ ಹಲ್ಕಿರಿದೆ ||
ಪರಮ ವಿಕ್ರಮವ ಕಂ | ಡರಿವೆ ದ್ಯೂತದಿ ನಿನ್ನ |
ಉರವ ಭೇದಿಪೆ ರಣದಿ || ೧೮೫ ||

**ಶಂಕರಾಭರಣ - ಮಟ್ಟೆ**
ಪಾಪಿ ಗಳಹಲೇಕೆ ಸುಪ್ರ |
ತಾಪದನುವ ತೋರೆನುತ್ತ |
ಭೂಪನನುಜಗಿಟ್ಟ ಗದೆಯೊ | ಳಾ ಪವನಸುತ || ೧೮೬ ||

ಹೊಯ್ದು ಭರಕೆ ನೃಪತಿಯನುಜ |
ಹಾಯ್ದು ಕೆಲಕೆ ಸಿಡಿದು ಗದೆಯೊ |
ಳಯ್ದೆ ಬಡಿದ ಕೆರಳಿ ಸಿಂಹ | ನಾದದಿಂದಲಿ || ೧೮೭ ||
ಖಳನ ಹತಿಗೆ ಜುಣಿಗಿ ಭೀಮ |
ಸೆಳೆಯಲದರ ಖತಿಯೊಳಸಿಯ |
ಝಳಪಿಸುತ್ತಲಿಳೆಯ ರುಣವು | ಕಳೆದುದಿಂದಿಗೆ || ೧೮೮ ||
ಕರುಳನುಗಿವೆನೆನೆತಲೆರಗೆ |
ಭರದೊಳಸಿಯ ಕಸಿದು ಭೀಮ |
ತುರುಬ ಹಿಡಿದನೇನನೆಂಬೆ | ಹರನ ವರದಲಿ || ೧೮೯ ||

**ಭಾಮಿನಿ**

ಧರೆಗೆ ತೆಗೆದಪ್ಪಳಿಸಿ ರೋಷದೊ |
ಳೊರೆದ ಭವನವನುರುಹುತವನಿಯ |
ನಿರದೆ ಸೆಳೆದುದಕಿದುವೆ ತರುಣಿಯನೆಳೆದ ಪಾತಕಕೆ ||
ಭರದೊಳಿದನೊಂದೊಂದ ಕೊಳ್ಳೆನು |
ತುರವಣಿಸಿ ಮೂದಲಿಸಿ ತುಳಿ ತುಳಿ |
ದುರುಳಿಸಿ ಕರದ್ವಯವ ಮುರಿದೇರಿದನು ಖಳನೊಡಲ || ೧೯೦ ||

**ವಾರ್ಧಕ**

ಉರವ ಖತಿಯಿಂದಿರಿದು ಸುರಿದು ರಕುತವ ನಲಿದು |
ತರುಣಿಗಿದ ತಿಳುಹೆಂದು ಚರಗರುಹಲವ ಬಂದು |
ವೊರೆಯೆ ದ್ರೌಪದಿ ಕೇಳಿ ಹರುಷ ಶರಧಿಯೊಳಾಳಿ ಪೊರಟಳಾ ಭೀಮನೆಡೆಗೆ ||
ಎರೆಯನೆಲ್ಲಿಹನೆಂದು ಅರಸುತ್ತೈತರಲಂದು |
ದುರುಳನಂಗವನೇರಿ ಹರಿವ ರುಧಿರವ ಹೀರಿ |
ಮೆರೆವವನನೀಕ್ಷಿಸುತ ಹರ ಹರ ಯಿದೇನೆನುತ ಎರಗಲಾಕೆಯನಪ್ಪುತ || ೧೯೧ ||

**ಕೇದಾರಗೌಳ - ಝಂಪೆ**

ನಳಿನಾಕ್ಷಿ ನೋಡೀತನ | ನಿನ್ನ ಪಿಡಿ |
ದೆಳೆದ ಖಳ ದುಶ್ಶಾಸನ ||
ತಿಳುಹು ಕೆಡಕೆಸಗಲಿವಗೆ | ಎನುತರುಣ |
ಜಲವನೆರಚಿದನು ತಲೆಗೆ || ೧೯೨ ||
ಹೊಡೆದು ದಂತಗಳ ಕಳಚಿ | ತೆಗೆದು ಸಿರಿ |
ಜಡೆಯ ಸಂತಸದಿ ಬಾಚಿ ||
ಮುಡಿಸುತೆಳೆಗರುಳ ಬೇಗ | ಕುರುರಾಯ |
ನೊಡನುದಿಸಿದೆಲ್ಲರೀಗ || ೧೯೩ ||
ಸಂದರುಳಿದೋರ್ವ ಖಳನಾ | ಮಡುಹಿ ನಿನ |
ಗೆಂದ ನುಡಿ ಸಲಿಸಿದಪೆ ನಾ ||
ಎಂದ ಕಾಂತನನಪ್ಪುತ | ನಗುತ ಜರೆ |
ದೆಂದಳಹಿತನ ಕಾಣುತ || ೧೯೪ ||

**ಮಧ್ಯಮಾವತಿ - ಅಷ್ಟ**

ಏನು ಮಲಗಿದೆಯೊ | ಪಾತಕಿ ಮಗು |
ಳೇನನೆಣಿಸುವೆಯೊ || ಪ ||
ಏನು ಮಲಗಿದೆ ಮ | ತ್ತೇನನೆಣಿಸುವೆಯೊ |
ಮಾನಭಂಗವೊ ದ್ಯೂತವೊ || ಪಾಮರ ವಿಷ |
ಪಾನವೊ ಕಾನನವೊ | ಗೃಹಕೆ ಶಿಖಿ |
ಯಾನಿಸುವಾ ಮನವೊ | ನಿಶ್ಚಲ ಸುಖ |
ಸ್ವಾನಂದದನುಭವವೊ || ಪಾತಕಿ ಮಗು || ಅ. ಪ ||

ನಾ ಪುಷ್ಪವತಿಯೆಂದರಂದು | ಬಿಡ |
ದಾ ಪೂರ್ಣ ಸಭೆಗೆಳತಂದು ||
ಕಾಪುರುಷನೆ ಲೋ | ಕಾಪವಾದವ ಮೀರಿ |
ನೀ ಪಿಡಿದೆಳೆದೆಯಲ್ಲ || ಮಾಡಿದ ಘೋರ |
ಪಾಪವೆಗ್ಗಳಿಸಿತಲ್ಲ | ನಿನ್ನವಳನು |
ತಾಪವ ಶಿವನೆ ಬಲ್ಲ || ನೋಡಿಹರೆನ್ನ |
ನಾಪತಿವ್ರತೆಯರೆಲ್ಲ || ಪಾತಕಿ ಮಗು || ೧೯೫ ||

**ಭಾಮಿನಿ**

ದುರುಳನನು ಜರೆದಿಂತು ದ್ರೌಪದಿ |
ಮರುತಜನ ಬಿಗಿದಪ್ಪಿ ತೋಷದಿ |
ಇರವ ಸಲಿಸಿದೆ ನಾಥ ಮನ್ಮನಪ್ರೀತ ಶುಗಜಾತ ||
ತರುಣಿಮನವನು ತಣಿಸಲಾರದ |
ಪುರುಷರಿರಲೇಕೆಂದು ಹರುಷ |
ಸ್ಫುರಿತಬಾಷ್ಪದೊಳಿರಗೆ ಹರಿ ನಗುತೆಂದನಣಕಿಸುತ || ೧೯೬ ||

**ಸುರುಟಿ - ಏಕ**

ವಾರಿಜಮುಖಿ ಜಾಣೆ | ದ್ರುಪದ ಕು |
ಮಾರಿ ಇದೇನೇನೆ ||
ನಾರಿಯೊ ನೀ ಹೆ | ಮ್ಮಾರಿಯೊ ತಿಳುಹು ವಿ |
ಕಾರವರಿಯಲೆದೆ | ಯಾರುವದಮಮ || ೧೯೭ ||
ನುಂಗಿದೆ ಕುರುಬಲವ | ಮತ್ತೊಡ |
ಲಿಂಗಿಡಲಿಹೆ ಕುಲವ ||
ಅಂಗವರಿಯೆ ಶುಗ | ಜಂಗೆರಡನೆಯ ಹಿ |
ಡಿಂಬೆ ದೊರೆತೆ ಭಲ | ತಂಗಿ ಶುಭಾಂಗಿ || ೧೯೮ ||
ಹಂಗಿಸಲ್ಯಾಕಿನ್ನು | ಮರೆತು ವಿ |
ಹಂಗಗಮನ ನೀನು ||
ತಂಗಿಯ ಭಾಷೆಯ | ಹಿಂಗದೆ ಸಲಿಸಿದೆ |
ಅಂಗಜತಾತ ಸು | ಮಂಗಲದಾತ || ೧೯೯ ||

**ಭಾಮಿನಿ**

ದೇವ ತವ ಮಾಯಕವನರಿವವ |
ನ್ಯಾವನಿಳೆಯೊಳು ಪದವ ನಂಬಿದ |
ಭಾವಿಕರ ನೆರೆ ಪೊರೆವೆ ದುಷ್ಕರ ತರಿದು ನೀನೆನುತ ||
ಭಾವಕಿಯು ಮಗುಳೆರಗಿ ಭವನಕೆ |
ಸಾವಧಾನದೊಳೈದಲಿತ್ತಲು |
ಆ ವಿಭಾಕರಪೌತ್ರ ಭೀಮನ ತರುಬಿ ಘರ್ಜಿಸುತ || ೨೦೦ ||

**ಘಂಟಾರವ - ಅಷ್ಟ**

ಘಡ ವೃಕೋದರ ಬಿಡೆ ನಿನ್ನ ಜೀವದಿ |
ಒಡಲ ಬಗೆದು ನೃಪಾನುಜನ ಹೊರ |
ಗೆಡವದಿರೆನೆನುತೆಚ್ಚನು || ೨೦೧ ||
ಮುರಿದು ವಾಯುಜ ಕೆರಳಿ ಗದೆಯೊಳಿಡ |
ಲುರುಳಿದನು ವೃಷಸೇನನವನಿಯೊ |
ಳರೆ ನಿಮಿಷ ಮೂರ್ಛಿಸುತಲಿ || ೨೦೨ ||
ಎದ್ದು ಕಂಕಾಲರುದ್ರನಂತುರಿಗರೆ |
ದದ್ದಿದನು ಮಹಶರದೊಳನಿಲಜ |
ಬಿದ್ದ ಮೈಮರೆದಿಳೆಯೊಳು || ೨೦೩ ||

**ಭಾಮಿನಿ**
ಶ್ರೀರಮಣನಿದಕಂಡು ರಥವನು |
ಹಾರಿಸಿದನಾಯೆಡೆಗೆ ಕರ್ಣಜ |
ನಾರುಭಟಿಸುತ್ತೊಡನೆ ದಿವ್ಯಾಸ್ತ್ರದಲಿ ಫಲಗುಣನ ||
ತೇರ ಬಂಧಿಸುತಿರದೆ ವಿಶಿಖವ |
ತೂರುತಿರೆ ನರ ಬೆರಗಿನಿಂದಿದ |
ನ್ಯಾರು ಕಲಿಸಿದರಮಮ ತನ್ನ ಕುಮಾರಗೆಣೆಯೆನುತ || ೨೦೪ ||

**ಮಾರವಿ - ಏಕ**
ಶಿರ ವಲವುತ ಬಹ | ಶರಗಳ ಖಂಡಿಸಿ |
ನರನುಸುರಿದನವಗೆ ||
ತರಳ ನಿನಗೆ ರಣ | ತರವಲ್ಲವು ಗೆಲ |
ಲರಿದು ತೆರಳು ಮನೆಗೆ || ೨೦೫ ||
ಸಣ್ಣವನಸ್ತ್ರಕೆ | ಚಿಣ್ಣತನವೆ ಮು |
ಕ್ಕಣ್ಣನೆ ಬರಲೀಗ ||
ಗಣ್ಯನೆ ನೀ ನೆನ | ಗೆನ್ನುತೆಸೆಯೆ ನರ |
ಚೂರ್ಣಿಸುತಲಿ ಬೇಗ || ೨೦೬ ||
ಶಿಶುವಧೆಗಲಸುತ | ಲುಸುರಿದೆ ಶೌರ್ಯದ |
ವಿಷ ತಲೆಗೇರಿಹುದು ||
ವಸುಧೆಗಿಳಿಪೆ ನೋ | ಡೆಂದು ಧನಂಜಯ |
ನೆಸಯಲದರ ಕಡಿದು || ೨೦೭ ||
ಗಳಹದಿರರಿತಿಹೆ | ಕಳವಿನೊಳಹಿತರ |
ಗೆಲಿದಿಹ ನೀತಿಯನು ||
ನಿಲಿಸುವೆ ತಾನರ | ಘಳಿಗೆಗೆನುತ ಶರ |
ವಳಯವ ತೂರಿದನು || ೨೦೮ ||
ಖಂಡಿಸಿ ಶರವಾ | ಖಂಡಲಸುತ ಖತಿ |
ಗೊಂಡು ಮಹಾಸ್ತ್ರವನು ||
ಮಂಡೆಗಿಡಲು ಬಲಿ | ಗೊಂಡುದು ತರಣಿಜ |
ಕಂದನ ರುಂಡವನು || ೨೦೯ ||

**ಭಾಮಿನಿ**
ಪುತ್ರನಳಿವನು ಕಾಣುತರ್ಕಜ |
ಪೃಥ್ವಿಯಲಿ ಹಂಮೈಸಿ ಬಾಲನ |
ನೆತ್ತಿ ತೊಡೆಯೊಳಗಿಟ್ಟು ಮರುಗಿದ ಶಿವ ಶಿವಾ ತನ್ನ ||
ಹೃತ್ಕುಮುದ ಶಶಿಯಡಗಿದನೆ ಕುಲ |
ರತ್ನವಿದು ಪುಡಿಯಾದುದೇ ಮಮ |
ಸತ್ವ ದಿನಮಣಿಗಾಯ್ತು ರಾಹುಗ್ರಸ್ತವಿಂದಿನಲಿ || ೨೧೦ ||

**ಶಂಕರಾಭರಣ - ತ್ರಿವುಡೆ**
ತೊರೆದು ತಾನಿರಲೆಂತು ಸುಂದರ |
ತರಳ ನಿನ್ನಾ | ಗುಣವನು ||
ಮರೆಯಲರಿದೆನ್ನಂತೆ ಪಾಪಿಗ | ಳಿರರು ಜಗದಿ || ೨೧೧ ||
ಕೊಂದ ಪಾತಕಿಗಹುದು ಕೊಲೆ ಮಗು |
ಳೆಂದ ಸ್ಮೃತಿಯಾ | ವಚನವು ||
ಇಂದು ಖರೆಯಾಯ್ತುಕಟ ಪಾರ್ಥನ | ಕಂದನಿಂದ || ೨೧೨ ||
ವಿಧಿಯ ತಂತ್ರಗಳೆನುತ ಸ್ವೈರಣೆ |
ವಡೆದು ಸುತನಾ | ಹರಿಬಕೆ ||
ಕಡಿವೆ ಕಂಠವನೆನುತ ಪಾರ್ಥನ | ತಡವುತೆಂದ || ೨೧೩ ||

**ಕಾಂಬೋಧಿ - ಝಂಪೆ**

ಎಲವೊ ನರ ಸೈಂಧವನ | ಕಳವಿನೊಳು ಶಿರವರಿದ |
ಛಲ ಕೊಳ್ಳದೆಮ್ಮೊಳತಿ ಬೇಗ ||
ಕಲಹಕಿದಿರಾಗುತಲೆ | ಯರಿವೆ ತಾನೆನಲು ಮೂ |
ದಲಿಸಿ ಫಲುಗುಣನೆಂದನಾಗ || ೨೧೪ ||
ಸುಡಲೆಲವೊ ಬಲುಹೆ ಬೆಂ | ಗಡೆಗೆ ನಿಲುತಭಿಮನ್ಯು |
ಪಿಡಿದ ಚಾಪವನು ಖಂಡಿಸಿದ ||
ಕಡುಹನರಿತಿಹೆ ಗೋಗ್ರ | ಹಣದಿ ನಿನ್ನಧಟುತನ |
ವಡಗಿತೇಕೆನೆ ರವಿಜ ನುಡಿದ || ೨೧೫ ||
ಗಳಹದಿರು ಭೂರಿಶ್ರ | ವನ ಕರವ ಕೈತವದೊ |
ಳಿಳುಹಿದವನ್ಯಾರು ಸಾಕಿರಲಿ ||
ತಿಳಿಯೆ ಗೋಗ್ರಹಣವ | ಲ್ಲಿಂದು ಪಾರ್ಥ ಗ್ರಹಣ |
ಗೆಲುವೆ ತಾ ಭರ್ಗನೈತರಲಿ || ೨೧೬ ||
ಭರ್ಗನ್ಯಾಕೆಲವೊ ಕುರು | ವರ್ಗವನು ಚಿತ್ರಾಂಗ |
ಸ್ವರ್ಗಕೆಳೆದೊಯ್ವ ಸಮಯದಲಿ ||
ಉಗ್ರವೇನಾಯ್ತವನ | ನಿಗ್ರಹಿಸಿದವನ್ಯಾರು |
ಹಿಗ್ಗಿದೇಕೆನೆ ರವಿಜ | ಕನಲಿ || ೨೧೭ ||
ಪಂಥವನು ತೆಗೆ ತೆಗೆ ಕೃ | ತಾಂತಸುತನೆಂಬ ಕುರಿ |
ಯಂ ತೆಗೆದು ನೆಲನೊಳಪ್ಪಳಿಸಿ ||
ಹೊಂತಕಾರಿಗಳಿದಿರು | ತುಳಿಯಲಾತನ ಬಿಡಿಸಿ |
ದಂಥ ಭಟನೆಂದ ಗಹಗಹಿಸಿ || ೨೧೮ ||

**ವಾರ್ಧಕ**

ಪೂತು ರವಿಸುತ ಬರಿಯ ಮಾತಿನಲಿ ನಿಪುಣ ಶರ |
ವ್ರಾತವಿರೆ ತೆಗೆಯೆನುತ ನರನೆಸೆಯಲರ್ಕಜಂ |
ಘಾತಿಸುತಲನಲಾಸ್ತ್ರ ಬಿಡೆ ವಾರುಣದಿ ಗೆಲಿದ ಪಾರ್ಥನಂ ಮಿಹಿರಾಸ್ತ್ರದಿ ||
ಆ ತರಣಿಜಾತನಿಡೆ ನಾರಾಯಣಾಸ್ತ್ರದಿಂ |
ಶ್ವೇತವಾಹನ  ಕಡಿಯಲೈಂದ್ರ ವೈಷ್ಣವದಿ ಕಡು |
ಖಾತಿಯಿಂ ರುದ್ರರೌದ್ರಾಸ್ತ್ರ ಚತುರಾಸ್ಯ ಕಮಲಾತ್ಮಭವ ಬಾಣಗಳಲಿ || ೨೧೯ ||

**ಭಾಮಿನಿ**

ಇಂತು ಸಮರದಿ ಸುಭಟರೀರ್ವರು |
ಪಂಥದಲಿ ಹೊಯ್ದಾಡುತೊಡನೆ ಕೃ |
ತಾಂತ ಸಹಭವನುಗಿದ ರೋಷದೊಳಸಮ ಫಣಿಶರವ ||
ನಿಂತುಭಯದಳ ಬೆದರೆ ಧರ್ಮಜ |
ಅಂತರಂಗದಿ ಚಿಂತಿಸಿದನದ |
ನೆಂತು ಬಣ್ಣಿಪೆನಾ ಮಹಾಸ್ತ್ರವ ತಿರುವಿಗೇರಿಸಲು || ೨೨೦ ||

**ಸೌರಾಷ್ಟ್ರ - ತ್ರಿವುಡೆ**

ಕಂಡು ನುಡಿದನು ಶಲ್ಯ ಮಕುಟವ |
ಕೊಂಡು ಫಲವೇನೀ ಮಹಾಸ್ತ್ರದಿ |
ಖಂಡಿಸುವುದೆದೆಗಿಟ್ಟು ಪಾರ್ಥನ | ರುಂಡವೆನಲು || ೨೨೧ ||
ಅರರೆ ಶಸ್ತ್ರಾಗಮವ ನೀನೆನ |
ಗರುಹುವೆಯ ಮಝಬಾಪು ನೆಗಹಿದ |
ಗುರಿಯನಿಳುಹುವರುಂಟೆ ಸರಿ ಫಡ | ಮರುಳೆ ಕೆಲಕೆ || ೨೨೨ ||

**ದೇಶಿ - ಅಷ್ಟ**
ಎಂದು ಕೋಪದೊಳೆಸೆಯೆ ಸ್ಯಂದನವ ಗೋ |
ವಿಂದನಡಚಲು ನರನ ಮಕುಟವ |
ಕೊಂಡು ಬಾಂದಳಕಡರುತ || ೨೨೩ ||
ಕಂಡು ಮೋಸವಾಯ್ತೆನುತ ಮರಳಿ ಕರ್ಣ |
ಗಂದು ತಿಳುಹಿಸಿ ನಿಜವ ತೊಡು ಮಗು |
ಳೆಂದು ತಾರ್ಕ್ಷಿಕಿ ಬೇಡಲು || ೨೨೪ ||
ಮರುಳು ಸಾಯಕ ತೆರಳು ಭಾಸ್ಕರಸುತ |
ಪರರ ಹಂಗಿಲಿ ಗೆಲುವನೇ ಮಗು |
ಳರಿಗೆ ರಿಪು ತೊಲಗೆಂದನು || ೨೨೫ ||

**ಮಾರವಿ - ಏಕ**
ಪರಿಕಿಸುತರ್ಕಜ | ಗರುಹಿದ ಶಲ್ಯನು |
ತೊರೆದೀ ಮಹಶರವ ||
ಇರಿಯದಿರರಸನ | ಧರಿಸುತಲಿದ ಕಡಿ |
ದಿರಿಸು ನರನ ಶಿರವ || ೨೨೬ ||

**ಸುರುಟಿ - ಏಕ**
ಹೆತ್ತವಳಿಗೆ ನಾನು | ಭಾಷೆಯ |
ನಿತ್ತೆ ಮಹಾಸ್ತ್ರವನು ||
ಎತ್ತೆನು ಮರಳಿಯಿ | ದೆತ್ತಣ ನೀತಿಯ |
ನಿತ್ಯ ಶರೀರಕೆ | ಸತ್ಯವ ಮಾರಲೆ || ೨೨೭ ||

**ಮಾರವಿ - ಏಕ**
ಅಂಬಿದ ತೊಡೆ ನೀ | ನೆಂಬೆ ನದಿಜ ನರ |
ನಂಬಿಗೊಡಲನಿತ್ತ ||
ಕುಂಭಜ ಸುತನೆಂ | ದೈದಿದ ಮೂವರ |
ನಂಬಿ ನೃಪತಿ ಕೆಟ್ಟ || ೨೨೮ ||

**ಸುರುಟಿ - ಏಕ**
ಈ ತೆರನಾಡುವರೆ | ನಡೆಸು ವ |
ರೂಥವ ಕಾದುವರೆ ||
ಏತರವನು ನರ | ಘಾತಿಪೆನುರುಶರ |
ವ್ರಾತವಿಹುದು ತೊಡ | ಲೇತಕೆ ಮಗುಳಿದ || ೨೨೯ ||

**ಮಾರವಿ - ಏಕ**
ಸತ್ಯವೆನುತ ದಿ | ವ್ಯಾಸ್ತ್ರವ ಮಾರಿದೆ |
ಮತ್ತೆ ಗೆಲುವೆಯೆಂದು ||
ಸತ್ವವರಿತೆ ಕ್ಷಣ | ಮತ್ತಿರೆನೆನುತಲಿ |
ಪೃಥ್ವಿಗಿಳಿದನಂದು || ೨೩೦ ||

**ಭಾಮಿನಿ**
ಮಂದಮತಿ ಸಾರೆಲವೊ ನುಡಿಯೆಮು |
ಗೊಂದು ಮಿಗೆ ದಿವ್ಯಾಸ್ತ್ರದೆಸುಗೆಯ |
ದೊಂದು ದಿಟ ದೇಹಾಂತದಂಡನ ವಂದು ಕಡೆತನಕ ||
ಹೊಂದಲರಿದನೃತಭಯ ಲೋಭಗ |
ಳೆಂದೆನುವುದೆಮ್ಮೊಡೆಯನವನಿಪ |
ಬಂದು ಕೆಡಿಸಿದ ಕೊಲುವ ಸಮಯದೊಳಧಮ ತೊಲಗೆಂದ || ೨೩೧ ||

**ಪಂಚಾಗತಿ - ಮಟ್ಟೆ**
ಕಡುಗಿ ಶಲ್ಯನೈದೆ ರಥವ | ನಡೆಸುತಿನಸುತ ||
ಝಡಿದು ಸರಳ ಸುರಿಯಲವನಿ | ಯದುರೆ ಕಾಣುತ || ೨೩೨ ||
ನಡುವೆ ತರಿದು ನರನು ಧ್ವಜವ | ಕಡೆಯೆ ಭರದಲಿ ||
ಪೊಡವಿ ರಥವ ನುಂಗಲಿನಜ | ಮಿಡುಕಿ ಮನದಲಿ || ೨೩೩ ||
ಕಡೆಯ ಕಾಲವಡಸಿತಕಟ | ಒಡೆಯಗೆನ್ನುತ ||
ಪೊಡವಿಗಿಳಿವುತೊಡನೆ ರಥವ | ಪಿಡಿದು ನೆಗಹುತ || ೨೩೪ ||

**ಸಾಂಗತ್ಯ - ರೂಪಕ**
ನೆಗಹಲಾರದೆ ರಥ | ಖಗಜ ಸಂತಪಿಸುತ್ತ |
ಸುಗುಣನ ನೆನೆದು ತನ್ನೊಳಗೆ ||
ಜಗದೊಳಿಂಬಿಲ್ಲದಂ | ಬಿಗನ ತಂದುದರದ |
ಮಗನಂತೆ ಪೊರೆದೆ ಈ ವರೆಗೆ || ೨೩೫ ||
ಪೊಡವಿ ನುಂಗಿತು ರಥ | ದುಡುಕಿ ಹೋದನು ಸೂತ |
ಹಡೆದವ್ವ ಶರವ ಬೇಡಿದಳು ||
ಒಡೆಯ ನಿನ್ನಯ ಶಿರ | ಕಡಿದನು ಮುರಹರ |
ನುಡಿದೆನ್ನ ನಿಜವನಂತ್ಯದೊಳು || ೨೩೬ ||
ಶೀಲ ನಾ ಬಿಡಲಾರೆ | ಬಾಳಲಾಪೆಯ ಬೇರೆ |
ಆಳಲಿ ಧರೆಯ ಮತ್ತವರೆ ||
ಏಳು ಸಂಗಡ ತ್ರಿದಿ | ವಾಲಯಕಿಂದು ಭೂ |
ಪಾಲ ನೀ ಜತೆಯೊಳೈದುವರೆ|| ೨೩೭ ||

**ಭಾಮಿನಿ**
ಮರುಗುತೀಪರಿಯಲಿ ರಥಾಂಗಕೆ |
ಮರಳಿ ಕೈಗೊಡೆ ನರನೊಡನೆ ಮುರ |
ಹರನು ತೊಡು ದಿವ್ಯಾಸ್ತ್ರವೆನುತಿರೆ ಕರ್ಣ ಫಲಗುಣಗೆ ||
ಅರೆ ಘಳಿಗೆ ತಾಳೀಗ ಸ್ಯಂದನ |
ವರವ ನೆಗಹುವೆನರಿತು ಧರ್ಮವ |
ಮುರಿಯದಿರು ಕುಲಕೀರ್ತಿ ಕಲ್ಪದ್ರುಮವ ನೀನೆಂದ || ೨೩೮ ||

**ಕಂದ ಪದ್ಯ**
ತರಣಿಜನಿರವಂ ನೋಡುತ |
ಕರಗುತ ತನ್ನಯ ಮನದೋಳ್ ವಿಜಯಂ ||
ಎರಗುತ ಸುರಿವಶ್ರುಗಳಿಂ ಹರಿ |
ಚರಣವ ತೊಳೆವುತ ಬೆರಗಿನೊಳೆಂದಂ || ೨೩೯ ||

**ನೀಲಾಂಬರಿ - ರೂಪಕ**
ಸಿರಿಯ ಮನೋಹರ ಲಾಲಿಸು |
ಕರಗುತಲಿದೆ ಮನ ಸೈರಿಸು |
ತರಣಿಜನ್ಯಾರೆಂದರುಹಿಸು | ಮರುಕವ ಪರಿಹರಿಸು ||
ಪರಿಕಿಸಲಣ್ಣನ ಹೋಲುವ |
ತರಳನೆ ಕುಂತಿಗೆ ತಾನಿವ |
ಕರುಣದಿ ನುಡಿ ನುಡಿ ಕೇಶವ | ಶರಣರ ಸಂಜೀವ || ೨೪೦ ||
ಜಾರುತಲಿದೆ ಭುಜ ಧನುಶರ |
ಏರುತಲಿದೆ ನಿಜ ಕನಿಕರ |
ಬಾರದು ಕೊಲಲೆನ್ನಯ ಕರ | ಯಾರಿವ ಸಾಕಾರ ||
ಮೀರಿದ ಹಗೆಯಾದರೆ ಖತಿ |
ದೋರದೆ ಮರುಗುವದೇ ಮತಿ |
ಧಾರಿಣಿಯಾಸೆಗೆ ಭಾನು ಕು | ಮಾರನ ಕೊಲಲಾರೆ || ೨೪೧ ||

**ವಾರ್ಧಕ**
ಮರುಳುಗೊಂಬರೆ ವಿಜಯ ತರುಣಿಮಣಿ ದ್ರುಪದಜೆಯ |
ಪರಿಭವಿಸಿ ವಿಶ್ವಸಂಹರ ಧುರವನೆಮ್ಮಿ ಸಂ |
ಗರದಿ ತವ ಸುತನ ಭುಜವರಿದು ಪದದಿಂದೆಮಜಗೆರಗಿದವ ಕೌಂತೇಯನೆ ||
ಪರರಿಗುಸುರುವ ಧರ್ಮ ಚರಿಪುದತಿ ದುಷ್ಕರ್ಮ |
ಕರುಣವಿಡಲೇಕರಸಗೊರೆದ ಭಾಷೆಯ ನಡೆಸ |
ದಿರೆ ತಾನೆ ರಿಪುತಲೆಯನಿರಿದೀವೆ ನೃಪಗಿಳೆಯ ಸರಿಯೆಂದ ಹರಿ ಖತಿಯೊಳು || ೨೪೨ ||

**ಭಾಮಿನಿ**
ಅಚ್ಚರಿಯನೇನೆಂಬೆ ಹರಿನುಡಿ |
ಯಚ್ಚರಿಸೆ ಖತಿಮಸಗಿ ಕೆರಳಿದ |
ಕಿಚ್ಚಿನಲಿ ಕಿಡಿಗೆದರಿ ನರ ಕೈಗೆತ್ತಿದನು ಧನುವ ||
ಚಚ್ಚರದಿ ಕಲಿಕರ್ಣ ನಿಜ ರಥ |
ದಚ್ಚುಪಿಡಿದೆಬ್ಬಿಸುತ ಪಾರ್ಥನ |
ಮುಚ್ಚಿದನು ಮಹಶರದಿ ಕಲ್ಪದ ಕಡಲ ತೆರೆಯಂತೆ || ೨೪೩ ||

**ಸೌರಾಷ್ಟ್ರ - ತ್ರಿವುಡೆ**
ಕಡಿದು ಕಡುಗಲಿ ಪಾರ್ಥನಸ್ತ್ರದ |
ಗಡಣದಲಿ ಮುಸುಕಿದನು ಕರ್ಣನ |
ವಡನದರ ಪುಡಿಗೈದು ರವಿಸುತ | ಘುಡುಘುಡಿಸುತ || ೨೪೪ ||
ಝುಡಿದು ದಿವ್ಯಾಸ್ತ್ರದಲಿ ಫಲುಗುಣ |
ಪಿಡಿದ ಚಾಪದ ನಾರಿಯನು ಕಡಿ |
ವಡೆಯಲೀಕ್ಷಿಸಿ ಮೆಚ್ಚಿ ಮನದೊಳು | ಜಡಜನಾಭ ||೨೪೫ ||
ಭಾಪು ರವಿಸುತ ಭಳಿರೆ ಮಹರಥ |
ಭೂಪರೊಳು ಸರಿಗಾಣೆ ನಿನಗೆಂ |
ದಾಪರೇಶನು ಪೊಗಳುತಿರೆ ನರ | ಚಾಪವನ್ನು || ೨೪೬ ||
ಸರಿಗೊಳಿಸುತಿರೆ ತರಣಿ ಪಶ್ಚಿಮ |
ಶರಧಿಗಿಳಿವುದ ಕಂಡು ಶ್ರೀಹರಿ |
ನರಗೆ ತೊಡು ಕಡು ಜವದೊಳಂಜನ | ಶರವನೆಂದ || ೨೪೭ ||
ಒಡನೆ ಫಲುಗುಣನುಗಿದು ಶರವದ |
ನಿಡಲು ತಿರುವಿಗೆ ಭಯದಿ ತ್ರೈಜಗ |
ನಡುಗೆ ತೆಗೆದೆಚ್ಚನು ಮಹಾದ್ಭುತ | ನುಡಿಯಲೇನು || ೨೪೮ ||

**ಭಾಮಿನಿ**
ಭೂಮಿಪಾಲಕ ಕೇಳು ಕಿಡಿಗರೆ |
ದಾ ಮಹಾಶರವೈದಿ ಭರದಲಿ |
ತಾಮರಸಬಾಂಧವಕುಮಾರನ ಶಿರವನಿಳೆಗಿಳುಹೆ ||
ಯಾಮಿನಿಯೊಳೈದಿತು ಚತುರ್ಬಲ |
ತಾ ಮರುಗಿ ಕುರುರಾಯ ಶಲ್ಯನ |
ನೇಮಿಸಿದ ರಣಕೆಂದು ಧರ್ಮಜನರಿತು ಹರಿಗೆರಗಿ || ೨೪೯ ||

**ಕಲ್ಯಾಣಿ - ಅಷ್ಟ**
ದೇವ ಚಿತ್ತೈಸು ಬಿನ್ನಪವ | ಕುರು |
ಭೂವರ ದಳದೊಡೆತನವ ||
ಮಾವ ಶಲ್ಯನಿಗಿತ್ತ | ನವನ ಗೆಲುವನೆಮ್ಮೊ |
ಳ್ಯಾವನೆಂದರುಹಿಸಿ | ಕಾವುದೆಂದೆನಲಾಗ || ೨೫೦ ||

ಆಗದನ್ಯರೊಳಿದು ಸಹಜ | ಗೆಲ |
ವಾಗುವದೈದು ನೀ ಯಮಜ ||
ತಾಗು ವೈರಿಯನೆಂದು | ನಾಗತಲ್ಪನು ಪೇಳ |
ಲಾಗ ಸಂಗರಕನು | ವಾಗಿ ಬಂದನು ಭೂಪ || ೨೫೧ ||

**ಸೌರಾಷ್ಟ್ರ - ತ್ರಿವುಡೆ**

ರಣಕೆ ಬಹ ಧರ್ಮಜನ ಕಾಣುತ |
ಧನುವನೊದರಿಸುತೊಡನೆ ಮಾದ್ರಾ |
ಜನಪ ತರುಬಿದನವನಿಪಾಲನ | ಘನ ತವಕದಿ || ೨೫೨ ||
ಅಡವಿಯೊಳು ತರಗೆಲೆಯ ಸವಿಯದೆ |
ಪೊಡವಿಯಾಸೆಗೆ ನಮ್ಮ ಕೆಣಕಿದೆ |
ಕಡೆಯ ಕಾಲವೆ ಹೊರತು ಬದುಕುವ | ಗೊಡವೆಯುಂಟೆ || ೨೫೩ ||
ನಾಲಿಗೆಯ ರುಚಿಗಳುಕಿ ಕೌರವ |
ನೂಳಿಗವ ಕೈಕೊಂಡು ಭಗಿನಿಯ |
ಬಾಲಕರ ಕೊಲೆಗೊದಗಿ ಬಂದೆಯ | ಖೂಳನೆಂದ || ೨೫೪ ||
ಅವನಿಪಾಧಮ ನೀನು ದ್ಯೂತದ |
ಸವಿಗೆ ಮಾರಿದೆ ಸತಿಯನನ್ಯರ |
ಅವಗುಣವ ಕೊಂಡಾಡೆ ನಗುವರು | ದಿವಿಜ-ನರರು || ೪ || ೨೫೫ ||

**ಶಂಕರಾಭರಣ - ಮಟ್ಟೆ**

ನುಡಿಯ ಕೇಳುತಾಗ ಯಮಜ |
ಕಿಡಿಯನುಗುಳುತಿರದೆ ಶಸ್ತ್ರ |
ಗಡಣದಿಂದ ಮುಸುಕಲವನಿ | ನಡುಗೆ ಕಾಣುತ || ೨೫೬ ||
ನಡುವೆ ಕಡಿವುತೊಡನೆ ಶಲ್ಯ |
ಕಡುಗಿ ದಿವ್ಯಶರದೊಳಿಡಲು |
ಒಡಲನುಚ್ಚ್ಳಿಸಲು ಮೂರ್ಛೆ | ಯೊದಗಿ ಮಲಗಿದ || ೨೫೭ ||
ಉರಿಯನುಗುಳುತೆದ್ದು ಯಮಜ |
ನೆರಗಲಸಮ ಶಕ್ತಿಯಿಂದ |
ಭರದೊಳೈದಿ ಮಾದ್ರಪತಿಯ | ಶಿರವನರಿದುದು || ೨೫೮ ||

**ವಾರ್ಧಕ**

ಅಳಿದನೀಪರಿ ಶಲ್ಯ ಸಪ್ತಕಸುಶರ್ಮಕರ |
ಬಳಗಸಹಿತರ್ಜುನಂ ಶಿರವರಿಯಲಿತ್ತ ಸೌ |
ಬಲನ ಸಹದೇವ ತಲೆಗಡಿಯೆ ಕೌರವನ ಗಜದಳವ ಮಾರುತಿ ಮುರಿದನು ||
ಉಳಿದರೇಕಾದಶಕ್ಷೋಹಿಣೀ ಬಲದಿ ಕುರು |
ತಿಲಕ ಕೃಪ ಕೃತವರ್ಮ ಗುರುಸೂನುಸಹ ನಾಲ್ವ |
ರಿಳೆಯೊಳಿಂದಿಗೆ ದಿವಸ ಹದಿನೇಳು ಹಗಲರ್ಧ ಕಳೆದುದೇನೆಂಬೆನದನು || ೨೫೯ ||

**ಭೈರವಿ - ಝಂಪೆ**

ಪರಿಯನಿದ ಕುರುರಾಯ | ನರಿತು ಸಂತಾಪದಲಿ |
ಮರುಗಿ ವಿಧಿಯಕ್ಷರಗ | ಳರಿವಡರಿದೆನುತ || ೨೬೦ ||
ಏನೆಂಬೆ ದೈವಬಲ | ಹೀನ ತಾನದರಿಂದ |
ಸ್ಥಾಣುಸನ್ನಿಭ ಸಮರ | ತ್ರಾಣರಳಿದರಲ || ೨೬೧ ||
ಬಲವಳಿದರೇನು ಸಿರಿ | ತೊಲಗಲದಕೇನು ಛಲ |
ಕಳುಕೆ ನಿಜಕರದಿ ಗದೆ | ಯುಳಿಯೆ ಕೊಳುಗುಳದಿ || ೨೬೨ ||
ಬಿಡದೆ ರಿಪುಕುಲವ ತಲೆ | ಗಡಿದು ಹರಿಬವ ತೆಗೆವೆ |
ಒಡನುದಿಸಿದನುಜ ಸಖ | ಜಡಜಾಪ್ತಸುತರ || ೪ || ೨೬೩ ||

**ಭಾಮಿನಿ**

ಇಳಿವ ಕಂಬನಿಯಿಂದಲಂದಿನ |
ಕಲಹಕೆಂದಭಿಷಿಕ್ತನಾಗುತ |
ಲಲಿತ ತೋಳ್ಗದೆ ಮಾತ್ರ ಬಲದಿಂದರಸ ಹೊರವಂಟ ||
ಒಳವನರಿತಾಯೆಡೆಗೆ ರಾಯನ |
ಲಲನೆ ನಡೆತಂದೆರಗಿ ಚರಣವ |
ತೊಳೆವುತಶ್ರುಗಳಿಂದ ನುಡಿದಳು ಭಾನುಮತಿಯಳುತ || ೨೬೪ ||

**ಶಂಕರಾಭರಣ - ಏಕ**

ಕರವ ಮುಗಿವೆ ಸಮರಕಿನ್ನು |
ತೆರಳದಿರು ದಮ್ಮಯ್ಯ ಕುಂತಿ |
ತರಳರೊಡನೆ ಸಂಧಿಗೈದು | ಧರೆಯ ಪಾಲಿಸು || ೨೬೫ ||
ಆಳಲವರೆ ಸುಖದಿ ನಾವು |
ಕಾಲಗಳೆಯಬಹುದು ವನದಿ |
ಬಾಳಲಾರೆ ತೊರೆದು ನಿಮಿಷ | ಶೀಲ ನಿನ್ನನು || ೨೬೬ ||
ಹರನಿಗಳುಕದಖಿಲ ಭಟರು |
ಮರಣವಾದರುಳಿದೆಯೋರ್ವ |
ಸೆರಗನೊಡ್ಡಿ ಬೇಡಿಕೊಂಬೆ | ಶಿರವ ತೆರದಿರು || ೨೬೭ ||

**ಮಧುಮಾಧವಿ - ತ್ರಿವುಡೆ**

ಕೇಳು ಮಾನಿನಿ ಪೂರ್ವಸುಕೃತ ವಿ |
ಶಾಲವಾರಿಧಿ ಬರೆತು ಜಯಸಿರಿ |
ಕೋಳುಹೋದರೆ ತಡವರಾರಿಹ |
ರೇ ಲತಾಂಗಿ ಲೋಕದಿ || ೨೬೮ ||
ನಾರಿ ನೋಡೆಮಗಾಗಿ ಕೀರ್ತಿಶ |
ರೀರರಾದರು ಸೆಣಸಿ ನಿಜಪರಿ |
ವಾರ ಪುತ್ರಾಪ್ತರುಗಳೆಲ್ಲರು |
ಶೂರರೆನಿಸೀ ಸಮರದಿ || ೨೬೯ ||
ಧೀರ ತಾ ಹಿಂದೆಗೆಯೆ ಕದನಕೆ |
ಮೂರು ಜಗವಣಕಿಪುದು ರಿಪುಗಳ |
ವಾರವನು ಚಂಡರಿಯದಿರೆ ನಡೆ |
ವೀರ ಸತಿ ನೀನಳುವರೆ || ೨೭೦ ||

**ಸಾವೇರಿ - ಆದಿ**

ಎರೆಯ ನೀ ಕದನಕಿಂದು | ಪೋಪರೆ ನಿನ್ನ |
ಚರಣವ ಬಿಡೆ ತಾನೆಂದು ||
ಅರಸನನಪ್ಪಿದಳು | ಪಾದದಿ ಬಿದ್ದು |
ಉರುಳುತ್ತ ಮಗುಳೆಂದಳು || ೨೭೧ ||
ಇಳುಹೆ ಭೂಮಿಯ ಹೊರೆಯ | ನರನಾಗಿ ಬಂದ |
ನಿಳೆಗೆ ಶ್ರೀಕೃಷ್ಣರಾಯ ||
ಸುಲಭವಲ್ಲವನ ದ್ವೇಷ | ಮರೆಗೊಂಡರಿಹ |
ದೊಳು ಸೌಖ್ಯ ಪರದಿ ಮೋಕ್ಷ || ೨೭೨ ||

**ಭಾಮಿನಿ**
ಇಲ್ಲೆ ಸಂಶಯ ಛಲವ ನಾ ಬಿಡ |
ಲೊಲ್ಲೆ ಕೃಷ್ಣನ ಪರಿಯನರಿತಿಹೆ |
ನಲ್ಲೆ ನೀನೇನ್ ಬಲ್ಲೆ ಹರಿಯಿದಿರಲ್ಲೆ ಕಾಳಗದಿ ||
ಮಲ್ಲ ಸಹಸವ ಮೆರೆಸಿ ರಿಪುಗಳ |
ಚಲ್ಲುವೆನು ತಾನಳಿಯೆ ಸದ್ಗತಿ |
ಯಲ್ಲಿ ಕೂಡುವೆವೆಂದು ಕಂಬನಿಯೊರಸಿ ಬೀಳ್ಕೊಟ್ಟ || ೨೭೩ ||

**ವಾರ್ಧಕ**
ಸೃಷ್ಟಿಪತಿ ಕೇಳಿನ್ನು ಬಿತ್ತರಿಸಲೆಂತು ಮೆರೆ |
ವಷ್ಟಾದಶಾಕ್ಷೋಹಿಣೀಂದ್ರ ಗದೆಯಂ ಪೆಗಲೊ |
ಳಿಟ್ಟು ಬರಿಗಾಲ್ಮೆಲನೊಳಿಡುತ ಛತ್ರಾದಿಗಳ ಬಿಟ್ಟು ತಾನೋರ್ವ ರಣದಿ ||
ಇಟ್ಟಣಿಸಿ ಕೆಡದ ಹೆಣ ಬೆಟ್ಟಗಳನೇರಿಳಿವು |
ತಟ್ಟಿ ಬರುತಿಹ ಭೂತದಟ್ಟುಳಿಯನಿದಿರಿಸುತ |
ನೆಟ್ಟನೈತಂದು ನದಿಪುತ್ರನಡಿಗಳಿಗೆ ಶಿರವಿಟ್ಟನತಿ ದುಗುಡದಿಂದ || ೨೭೪ ||

**ಭಾಮಿನಿ**
ತಿಳಿದು ಗಂಗಾತರಳನುಸುರಿದ |
ಹಲವು ಮಾತೇನೆಸಗಿ ಸಂಧಿಯ |
ನಿಳೆಯ ಪಾಲಿಪುದೆನಲು ಬಳಿಕಿಂತೆಂದನಹಿಕೇತ ||
ಉಳಿಯಲೇನಿದೆ ತಾತ ರಿಪುಗಳ |
ತಲೆಯನಲ್ಲದೆ ನೆಲನನೊಲ್ಲೆನು |
ಛಲವ ಮೆರೆಸುವೆ ಕಲಹಕಪ್ಪಣೆಯೆನುತ ಕೈಮುಗಿದ || ೨೭೫ ||

**ಕೇದಾರಗೌಳ - ಅಷ್ಟ**
ಮನದಿ ಚಿಂತಿಸಿ ವಿಧಿ | ಯನು ಜರೆಯುತ ಭೀಷ್ಮ |
ತನಯಗೆಂದನು ದಯದಿ ||
ರಣಬೇಡವೀದಿನ | ನಡೆ ದ್ವೈಪಾಯನದೊಳು |
ಜನರರಿಯದ ತೆರದಿ || ೨೭೬ ||
ಕಾಲ ವಂಚಿಸು ಒದ | ಗುವ ನಾಳೆ ಯದುಕುಲ |
ಮೌಳಿಯ ಬಲದಿ ನೀನು ||
ಗೋಳುಗೊಂಬುದು ವೈರಿ | ಜಾಲವ ನಡೆ ಬೇಗ |
ತಾಳದೆ ದುಗುಡವನು || ೨೭೭ ||
ಅನುಮಾನವಿಡದೊಂದ | ನಾದರು ನಡೆಸೆಂದು |
ಮನವೊಲಿಸುತ ಭೀಷ್ಮನು ||
ಅಣುಗಗೆ ಜಲಮಂತ್ರ | ವನು ತಿಳುಹಿಸಿ ಬೇಗ |
ಜನಪನ ಬೀಳ್ಕೊಟ್ಟನು || ೨೭೮ ||

**ವಾರ್ಧಕ**
ಅರಸ ಕೇಳ್ ಸಂಜಯಂ ಧೃತರಾಷ್ಟ್ರಗಿದನೆಲ್ಲ |
ಅರುಹುತಿರೆ ಕೌರವಂ ಸರಸಿಯೆಡೆಗೈದಿ ಕರ |
ಚರಣವಂ ತೊಳೆದು ಮಂತ್ರವ ಪಠಿಸುತಿಳಿದ ಜಲಕಿರದೆ ಕುಲಗಗನರವಿಯು ||
ಮರುತಸಂಭವನಿತ್ತ ಕುರುಭೂಪನೆಲ್ಲೆಂದು |
ಮೆರೆವ ಷಷ್ಟಾಷ್ಟಯೋಜನ ರಣಕ್ಷೇತ್ರದೋಳ್ |
ಅರಸಿ ಕಾಣದೆ ವಿಧಿಯ ಜರೆವುತಿರಲಾಯೆಡೆಗೆ ತೆರಳುತೆಂದರು ಶಬರರು || ೨೭೯ ||

**ಮಧುಮಾಧವಿ - ಅಷ್ಟ**
ಗಾಳಿಯಣುಗ ವೈರಿ | ಶೈಲಾಳಿಕುಲಿಶ |
ವೇಳೆಯಾದುದ ಪೇಳ್ವೆ | ಪಾಲಿಪುದನಿಶ || ಪ ||
ಆಡಿ ಬೇಟೆಯ ಜಲ | ಕೋಡಿದೆವೆಲ್ಲ |
ನೋಡಿದಾಶ್ಚರಿಯವ | ನೊರೆವೆ ಸುಳ್ಳಲ್ಲ||
ಆ ದ್ವೈಪಾಯನದೊಳು | ಕೌರವಜ್ಯೇಷ್ಠ |
ಭೇದದೊಳಡಗಿಹ | ನಿದುವೆ ನಿರ್ದಿಷ್ಟ || ೨೮೦ ||
ತಡಿಯೊಳಶ್ವತ್ಥಾಮ | ಕೃಪ ಕೃತವರ್ಮ |
ಮಡುವಿನೊಳವನೀಶ | ನುಡಿದರ್ಥಮರ್ಮ ||
ನಡೆವುದೆಲ್ಲರು ಮರು | ತಜನಾಳ್ಗಳಿಲ್ಲ |
ಹುಡುಕುತ್ತೈತಹರೆಂಬು | ವುದ ಕೇಳ್ದೆವಲ್ಲ || ೨೮೧ ||

**ಭಾಮಿನಿ**
ಕೇಳವನಿಪತಿ ಶಬರರೆಂದುದ |
ನಾಲಿಸುತ ಸಂತೋಷದುಬ್ಬಿನೊ |
ಳಾಳುಗಳ ಮನ್ನಿಸುತ ಮರುತಜನಗ್ರಭವಗೆರಗಿ ||
ಖೂಳ ಕೌರವ ಜಲದೊಳಡಗಿಹ |
ನೇಳು ತಡಬಡ ಮಾಡದೀಕ್ಷಣ |
ಬೀಳುಹೊಯ್ವೆನು ಖಳನನೆನೆ ಹರಿ ಧರ್ಮಸುತಗೆಂದ || ೨೮೨ ||

**ಕೇದಾರಗೌಳ - ಅಷ್ಟ**
ಕಾಲನಂದನ ಕೇಳು | ಕಾಲಗಳೆಯಲೀಗ |
ಕಾಲವಲ್ಲಿದು ಖಳನು ||
ಕಾಲ ವಂಚಿಪ ಪ್ರಾತಃ | ಕಾಲದಿ ಗೆಲವಿಲ್ಲ |
ಕಾಲಭೈರವನಿಗಿನ್ನು || ೨೮೩ ||
ಬಲನ ನಿರೀಕ್ಷೆಯೊ | ಳಿಳಿದ ಜಲದಿ ನಾವು |
ಹಲಿಯೊದಗುವ ಮೊದಲೆ ||
ತಲೆಯರಿಯುವದೊಳ್ಳಿ | ತಳುಕದೆ ಪೊರಡಿರಿ |
ಸಲಿಲದ ಬಳಿಗೀಗಲೆ || ೨೮೪ ||
ಚತುರೋಪಾಯಗಳಿಂದ | ಮಥಿಸಿ ದುರ್ನೀತರ |
ಕ್ಷಿತಿಯ ಧರ್ಮದಿ ಪೊರೆವ ||
ಪೃಥಿವಿಪಾಲರ ಧರ್ಮ | ಚ್ಯುತಿಯಾಗದಿದು ಸರ್ವ |
ಶ್ರುತಿಮತವೆನೆ ಮಾಧವ || ೨೮೫ ||

**ಭಾಮಿನಿ**
ಮಂದರಾಧರನುಡಿಗೆ ಧರ್ಮಜ |
ನಂದು ಚಿಂತೆಯನುಳಿದು ಸೇನಾ |
ಸಂದಣಿಗಳೊಗ್ಗಿನಲಿ ಹರಿಯನುಜಾದ್ಯರೊಡಗೂಡಿ ||
ಚಂದದಿಂ ಪೊರಮಡಲು ಪಟುಭಟ |
ವೃಂದ ನಡೆವಬ್ಬರಕೆ ಕುಲಗಿರಿ |
ಕಂದರಗಳಲ್ಲಾಡೆ ಕುದಿದುಕ್ಕಿದವು ಕಡಲೇಳು || ೨೮೬ ||

**ಕಂದ ಪದ್ಯ**
ಇನಿತತಿ ರಭಸದಿ ದ್ವೈಪಾ |
ಯನದೆಡೆಗೈದುತಲಿನಸುತತರಳಂ ||
ಅನುಜರನುಂ ನಿಜ ಬಲಮಂ |
ನಿಲಿಸುತ ಜನಪತಿ ಕೌರವನನು ಕರೆದೆಂದಂ || ೨೮೭ ||

**ಕಾಂಬೋಧಿ - ಏಕ**
ಜಾಣನಹುದೊ ಭಳಿರೆ ಜಗದಿ | ಕೌರವೇಂದ್ರ || ಸಮರ |
ತ್ರಾಣನೆಂಬುದರಿತೆನೀಗ | ಕೌರವೇಂದ್ರ ||
ಮಾನಧನ ನೀನೆನಿಸಿಕೊಂಡು | ಕೌರವೇಂದ್ರ || ಎಂಥ |
ಹೀನತನವ ಗೈದೆಯಿಂದು | ಕೌರವೇಂದ್ರ || ೨೮೮ ||
ಛಲವನುಳಿದು ಜಲದೊಳಿಳಿದೆ | ಕೌರವೇಂದ್ರ || ಪುಟ್ಟಿ |
ಕಳೆದೆಯಮ್ಮನ್ವಯದ ಖ್ಯಾತಿ | ಕೌರವೇಂದ್ರ ||
ಇಳೆಯೊಳಿರ್ಪ ಮನಗಳುಂಟೆ | ಕೌರವೇಂದ್ರ || ಸಂಧಿ |
ಗೊಲಿದು ಬಾರೇಳೀಗ ತಡಿಗೆ | ಕೌರವೇಂದ್ರ || ೨೮೯ ||

**ಭಾಮಿನಿ**
ಭೂತಳಾಧಿಪನಿಂತು ಕುರುಭೂ |
ನಾಥನನು ಮೂದಲಿಸಿ ಕರೆಯಲು |
ಮಾತನಾಡದೆ ಫಣಿಪತಾಕನು ಮೌನದಿಂದಿರಲು ||
ನೀತಿಯಲ್ಲೆಂದೆನುತ ಪಟು ಭಟ |
ವ್ರಾತ ಜರೆದುದು ಸಿಂಧುಘೋಷದಿ |
ವಾತಸಂಭವನೆಂದ ಕಡು ರೋಷಾತಿರೇಕದೊಳು || ೨೯೦ ||

**ಸೌರಾಷ್ಟ್ರ - ತ್ರಿವುಡೆ**
ನೃಪಕುಲಾಧಮನೇಳು ವಿಷಮಯ |
ದಪರಿಮಿತ ಖಾದ್ಯಗಳ ಮಾಡಿಸು |
ಕಪಟ ದ್ಯೂತವನಾಡಿ ಯೆಳೆಸ್ಯೆ | ದ್ರುಪದಸುತೆಯ || ೨೯೧ ||
ಜಲದೊಳಡಗಿದೆ ಯಾಕೆ ರಿಪುಗಳ |
ಹಳುವಕಟ್ಟಿದ ಕಡುಹದೆಲ್ಲಿದೆ |
ಗೆಲುವೆನ್ನೆವರನೆಂಬ ಛಲಗಳ | ನುಳಿದೆಯೇನೈ || ೨೯೨ ||
ಮಡದಿಗೇನೆಂದುಸುರಿ ಜಡದೊಳ |
ಗಡಗಿ ಮಲಗಿದೆ ಸುಡು ನಪುಂಸಕ |
ಬಿಡೆನು ಜೀವದಿ ನಿನ್ನ ಮಡುವಿದ | ಕುಡಿವೆನೆಂದ || ೨೯೩ ||

**ಭಾಮಿನಿ**
ಜರೆಯುತಿರಲೀ ತೆರದಿ ಭೀಮನ |
ಬಿರುನುಡಿಗಳಲಗಾಗಿ ಮರ್ಮವ |
ಕೊರೆಯೆ ಕೋಪದಿ ಕುದಿದು ಮಂತ್ರವ ಮರೆದು ಕೊಳದಿಂದ ||
ಧರೆಯನೊಡೆದ್ಯೆತಪ್ಪ ರುದ್ರನ |
ತೆರದಿ ಕೆಂಗಿಡಿಗೆದರಿದಕ್ಷಿಯೊ |
ಳಿರದೆ ಕೌರವರಾಯ ಗದೆಗೊಂಡಡರಿದನು ತಡಿಗೆ || ೨೯೪ ||

**ಘಂಟಾರವ - ಅಷ್ಟ**
ತಡಿಗೆ ಕೌರವನಡರಿ ಮಹೋಗ್ರದಿ ||
ಘುಡುಗುಡಿಸುತಡಹಾಯ್ದು ರಿಪುಬಲ |
ಕಡಲ ವೀರಾವೇಶದಿ || ೨೯೫ ||
ತುಡುಕು ಧರ್ಮಜ ಧನುವ ಮರುತ್ಸುತ ||
ಪಿಡಿ ಗದೆಯ ನರ ಯಮಳ ದ್ರುಪದಜ |
ರೊದಗಿರೀಕ್ಷಣ ಕದನಕೆ || ೨೯೬ ||
ಗದೆಯೊಳೆಲ್ಲರ ಸದೆದು ಭೂತಂಗಳಿ ||
ಗಡಗನುಣಿಸದೆ ಬಿಡೆನೆನುತ ಕುರು |
ಪೊಡವಿಪತಿ ಘರ್ಜಿಸಿದನು || ೨೯೭ ||

**ಭಾಮಿನಿ**
ಕಲಿತನವ ಕಂಡಾ ಸುಯೋಧನ |
ಗೊಲಿದು ಯಮಸುತನೆಂದ ನಿಜಬಲ |
ವಳಿದು ನೀನುಳಿದೋರ್ವನೆಲ್ಲರ ಗೆಲುವೆನೆಂಬೆಯಲ ||
ಛಲಕೆ ಮೆಚ್ಚಿದೆ ರಾಯ ಕದನದಿ |
ಗೆಲಿದರೆಮ್ಮೊಳಗೊಬ್ಬನನು ನಿನ |
ಗಿಳೆಯನಿತ್ತುಳಿದವರು ಸೇವೆಯೊಳಿರ್ಪವೆನಲಾಗ || ೨೯೮ ||

**ಸಾರಂಗ - ತ್ರಿವುಡೆ**
ನಿನ್ನ ವಿಕ್ರಮವನೆಲ್ಲ | ಬಲ್ಲೆನು ರಣ |
ಕೆನ್ನ ನೀ ಕರೆವೆಯಲ್ಲ || ಪಂಚಾಂಗವಲ್ಲ ||
ಸಣ್ಣವನು ನರ | ನಿವನ ತೆಗೆ ಯೆಳೆ |
ಚಿಣ್ಣರಶ್ವಿನಿಸುತರು ಸಂಗರ |
ಕಿನ್ನು ಭೀಮನ | ನೆನ್ನಿದಿರು ಬಿಡು |
ಮಣ್ಣ ಗೂಡಿಪೆನವನ ನಿಮಿಷದಿ || ೨೯೯ ||
ಕಾಮಿನಿಗಿತ್ತಿಹನು | ಭಾಷೆಯ ಪರಿ |
ಣಾಮವೇನೆಂಬುದನು || ಏನರಿಯದಿವನು |
ಭೂಮಿಪತಿ ಕೌರವನ ಸಮರದಿ |
ತಾ ಮುರಿವೆನೆಂದಾಡಿದಾತನ ||
ಭೀಮಭುಜಬಲ ಮೆರೆಯಿಸಲಿ ಸಂ |
ಗ್ರಾಮದಲಿ ತನ್ನಿದಿರೊಳೆನೆ ಹರಿ || ೩೦೦ ||

**ಬೇಗಡೆ - ತ್ರಿವುಡೆ**
ಅಹಹ ಮೆಚ್ಚಿದೆನೈ ಭಾವ | ಮೆಚ್ಚಿದೆ ವೀರ |
ಸಹಜ ಸಂಜನಿತ ಭಾವ || ಪ ||
ಅಹಹ ಮೆಚ್ಚಿದೆ ಭಾವ ಹಲವರು |
ಮಹಿಯೊಳುದಿಸಿದರೇನು ನಿನ್ನಂ |
ತಹರ ಕಾಣೆನು ಸಹಸಧನನಹು |
ದಹುದು ಭಲ ಫಣಿರಾಜಕೇತನ || ಅಹಹ || ಅ. ಪ. ||
ಸರಿವೀರರೊಡನೆ ಯುದ್ಧ | ಸಿದ್ಧವು ಲೋಕ |
ವರಿಯೆ ಆದರ್ಶ ಬದ್ಧ ||
ಸರಳನು | ಹಿತವರಿಯನೀ ಯಮ |
ತರಳನು | ಮಿಕ್ಕೊರೆದ ನಿನ್ನಯ |
ತಿರುಳನು | ತಾನೆಣಿಸದೆಯೆ ಮತಿ |
ವಿರಳನು || ಎಂತೊರೆದರೇನು ||
ಗಿರಿಯ ನಗ ಕೇ | ಸರಿಯ ಹರಿ ಮದ |
ಕರಿಯನಿಭ ತಡೆ | ದಿರಿವ ತೆರ ಕಲಿ |
ಮರುತಜಾತನ | ಧುರವ ಬಯಸಿದೆ |
ಹರುಷವೆನಲುರಿ | ದುರಿದು ಕುರುಪತಿ || ಅಹಹ || ೩೦೧ ||

**ಸುರುಟಿ - ಏಕ**
ಬಲ್ಲೆನೆಲವೊ ನಿನ್ನ | ಬೆಡಗಿನ |
ಸೊಲ್ಲ ನಿಲಿಸು ಮುನ್ನ ||
ಚೆಲ್ವ ಸುಧೆಯ ಜತೆ | ಯಲ್ಲಿ ಜನಿಸಿ ವಿಷ |
ವೆಲ್ಲರ  ಬಾಧಿಸ | ಲಿಲ್ಲವೆ ತತ್ವರಿ || ೩೦೨ ||
ವಂದಿತ ಬಲನೊಡನೆ | ನೀ ಜನಿ |
ಹೊಂದಿದೆ ಕಪಟಿಗನೆ ||
ಬಂಧುಗಳೊಳು ಸರಿ | ಹೊಂದಿಸಿ ಜಗಳವ |
ಕೊಂದೆಯಖಿಲನೃಪ | ವೃಂದವನೆನುತಿರೆ || ೩೦೩ ||

ಧರೆಯ ತೀರ್ಥಂಗಳನು | ಮಿಂದತಿ |
ಹರುಷದಿ ಹಲಧರನು ||
ವೆರಸುತ ಮುನಿಗಳ | ಕುರುಪತಿಯನು ಕಾಂ |
ಬುರುತರ ತವಕದಿ | ಹರಿತರಲಲ್ಲಿಗೆ|| ೩೦೪ ||

**ಭಾಮಿನಿ**

ಬರುವ ಮುಸಲಿಯ ಕಂಡು ಹರಿಸಹಿ |
ತೆರಗಿ ನಿಂದಿರೆ ಪಾಂಡವರು ಬಳಿ |
ಕರಸ ಕೌರವ ಶಿರವ ಚರಣದೊಳಿಡಲು ಪರಿಕಿಸುತ ||
ಇರುವನೋರ್ವನೆ ರಾಯ ಪರಬಲ |
ಭರಿತವಿಹುದಿದನರಿಯೆ ಕೃಷ್ಣನ |
ಪಿರಿದು ಕಪಟಗಳೆನುತ ಮುಳಿದಾ ರಾಮ ಕುರುಪತಿಯ || ೩೦೫ ||

**ಕಾಂಬೋಧಿ - ಝಂಪೆ**

ಸೆಳೆದು ತೆಗೆದಪ್ಪಿ ವಿಧಿ | ಯೊಳವನರಿವವರುಂಟೆ |
ಕಳವಳಿಸಲೇಕೆ ಧೈರ್ಯವನು ||
ತಳೆವುದರೆಕ್ಷಣದಿ ರಿಪು | ಗಳ ಶಿರವ ಕಡಿದು ನಿನ |
ಗಿಳೆಯ ಸ್ಥಿರಗೊಳಿಸಿ ತೆರಳುವೆನು || ೩೦೬ ||
ಛಲಕೆ ಹಳಚಿದೆನಲ್ಲ | ದಿಳೆಯ ಬಯಸಿದುದಿಲ್ಲ |
ಉಳಿದು ತಾನೋರ್ವನಾಳುವೆನೆ ||
ಜಲಜಾಪ್ತಜಾತನಸು | ಗಳಚಲೊದಗಿದ ಹಾಳು |
ನೆಲನ ಸುಡಲೆನುತ ಬಲನೊಡನೆ || ೩೦೭ ||
ಕೊಂದವರ ಕೊಲೆಗಾಗಿ | ನಿಂದೆ ರಣಕಿಂದು ಕಡೆ |
ಹೊಂದದಿದು ಹಗೆಯನ್ಯರಿಂದ ||
ಹಂದೆಗಳ ತಲೆಗಡಿದು | ಬಂಧುಗಳ ಹರಿಬವನು |
ಒಂದೆ ಕ್ಷಣದಲಿ ತೆಗೆವೆನೆಂದ || ೩೦೮ ||

**ಮಾರವಿ - ಏಕ**

ಕಂಡು ವೃಕೋದರ ಕೊಂದು ಕಳೆವೆ ಬಾ |
ರೆಂದು ತಿರುಹೆ ಗದೆಯ ||
ಹೆಂಡತಿಯನು ಯೆಳೆ | ವಂದು ಬಿಡಿಸಿದವ |
ನೆಂದನವನಿಯೊಡೆಯ || ೩೦೯ ||
ಒದರದಿರಾ ಖಳ | ನುದರವ ಭೇದಿಸೆ |
ಬಿಡಿಸಿದ ಭಟನೆಂದ ||
ಮಡುಹಲು ಕಂಡಭಿ | ಮನ್ಯುವನುಳುಹಿದ |
ಕಡು ಸಾಹಸಿಯೆಂದ || ೩೧೦ ||
ಖಿಲ್ಲ ಗೋಗ್ರುಹಣವ | ನಿಲ್ಲದೆಸಗಿ ರಣ |
ದಲ್ಲಿ ಗೆಲಿದೆ ನರನ ||
ಬಲ್ಲೆನು ರವಿಸುತ | ಚಲ್ಲಬಡಿದು ತುದಿ |
ಬಿಲ್ಲೊಳಿರಿದ ತೆರನ || ೩೧೧ ||
ಮರೆತೆಯ ಖೇಚರ | ವರ ಸಂಗರದೊಳು |
ಕರಗಳ ಬಿಗಿದಿರ್ಪ ||
ಕರಿಯ ಚರಣದಡಿ | ಗುರುಳಿದ ವಿಕ್ರಮ |
ವರಿತಿಹೆ ಬಿಡು ದರ್ಪ || ೩೧೨ ||
ಚದುರನಹುದು ದಿಟ | ಸುಡಿಸಲು ಭವನವ |
ಕೊಡಿಸಲು ವಿಷದೂಟ ||
ಅಡವಿಯೊಳಲೆದಲೆ | ದಡುಗೆಯ ಗೈವುದು |
ಕಡುಗಲಿಗದು ಮಾಟ || ೩೧೩ ||

**ಭಾಮಿನಿ**
ಎಂದು ತಮ್ಮೊಳು ಮೂದಲಿಸಿ ಗದೆ |
ಗೊಂಡು ತಿರುಹುತ ಸಿಂಹನಾದದಿ |
ಮುಂದುವರಿಯಲು ರಣಕೆ ನಭದಲಿ ನಂದಿವಾಹನನು ||
ನಿಂದು ನೋಡುವೆನಿವರ ಕದನವ |
ನೆಂದು ಕಮಲಜ ಸುರಪ ಮುಖ್ಯರ |
ಸಂದಣಿಯೊಳೆಸೆದಿರೆ ಸುಯೋಧನಗೆಂದನಾ ಭೀಮ || ೩೧೪ ||

**ಕಾಂಬೋಧಿ - ಝಂಪೆ**
ಕೊಲಿಸಿ ಬಾಂಧವರುಗಳ | ಜಲದೊಳಡಗಿದ ನಿನ್ನ |
ಬಲುಹಿಗಿದಿರುಂಟೆ ಮಝ ಸಹಸಿ ||
ಕೊಲುವೆ ತಾನೆನುತ ಕಡು | ಮುಳಿದು ತೆಗೆದೆರಗೆ ಕುರು |
ತಿಲಕ ತಡೆದೆಂದ ಮೂದಲಿಸಿ || ೩೧೫ ||
ಊಟವಲ್ಲೆಲವೊ ಹೊ | ಯ್ದಾಟವಿದು ಬರಿದೆ ವಾ |
ಚ್ಯಾಟವ್ಯಾರೊಳು ದ್ಯೂತವಾಸ ||
ಏಟನಿದ ತಾಳೆಂದು | ಕೋಟಿ ಸಿಡಿಲಂತೆರಗೆ |
ಮೀಟಿ ಗದೆಯಿಂದ ಬಕನಾಶ || ೩೧೬ ||
ಮೋಸದಲಿ ಗೆಲಿದ ಸಮ | ದೋಷದುರಿಯಿಂ ಪೆಣನ |
ರಾಶಿಯಾಯಿತು ರಣಾಂಗಣದಿ ||
ಘಾಸಿಸುವೆ ನಿನ್ನನೆಂ | ದಾಶುಗಜನೆರಗೆ ವಾ |
ತಾಶನಧ್ವಜ ಸಿಡಿದು ಭರದಿ || ೩೧೭ ||
ಮರುಳೆ ದೈವಾಧೀನ | ಮರಣ ಜನನಗಳೆಂಬು |
ದರಿಯೆ ನಿನ್ನಿಂದಾದುದೇನು ||
ಉರವ ಬಗೆದನುಜರನು | ಹೊರತೆಗೆವೆನೆನುತೆರಗೆ |
ಧರೆಗುರುಳುತೆದ್ದು ಮರುತಜನು || ೩೧೮ ||
ಎಲವೊ ನಿನ್ನನು ಕಾಯ್ವ | ಕೊಲುವಡಾನಲ್ಲದೇ |
ಹಲವು ದೈವಗಳುಂಟೆ ಮರುಳೆ ||
ತೊಲಗಬೇಡೆನುತುಲಿದು | ಹೊಯ್ದು ಭರಕವನೀಶ |
ತಳೆದು ಮೂರ್ಛೆಯನೆದ್ದು ಮಗುಳೆ || ೩೧೯ ||

**ಭಾಮಿನಿ**
ಓರ್ವರೋರ್ವರ ಗೆಲುವ ಮನದಿಂ |
ದೀರ್ವರೀಪರಿ ಕಾದುವಧಟಿಗೆ |
ಊರ್ವಿ ಕಂಪಿಸಿತೇನನುಸುರುವೆನವರ ಸಾಹಸವ ||
ಶರ್ವ ಸಹ ತಲೆದೂಗುತಿರಲು ಸು |
ಪರ್ವತತಿ ಕಂಡುಬ್ಬಿನಲಿ ಗಂ |
ಧರ್ವಗತಿಯಿಂದಂತರಿಕ್ಷಕೆ ನೆಗೆದು ಕೌರವನು || ೩೨೦ ||

**ಸೌರಾಷ್ಟ್ರ - ತ್ರಿವುಡೆ**
ಅರರೆ ನರಪಶು ಮನದಿ ಗುರುಹಿರಿ |
ಯರನು ಧ್ಯಾನಿಸುತಿಷ್ಟ ದೈವವ |
ಸ್ಮರಿಸು ಕೃಷ್ಣನ ಭಜಿಸು ನಿನ್ನಯ | ಶಿರವನುಳುಹೆ || ೩೨೧ ||
ಹರನ ಸಹಯಕೆ ಬರಿಸು ಬ್ರಹ್ಮನ |
ಕರೆಸು ಸಾಯದ ತೆರನುಪಾಯವ |
ಮರೆಯದೆಸಗುವದೆನುತ ಭೀಮನ | ಶಿರದೊಳೆರಗೆ || ೩೨೨ ||

**ಭಾಮಿನಿ**
ಧರಣಿಪತಿ ಕೇಳಿಂತು ಭೀಮನ |
ಶಿರಕೆರಗಲಾಹತಿಗೆ ನಡುದಲೆ |
ಬಿರಿದು ಕೆಡೆದನು ಕುಸಿದು ಕುಲಗಿರಿ ಮಲಗಿತೆಂಬಂತೆ ||
ಭರಿತ ಸಂತೋಷದಲಿ ಕೌರವ |
ರರಸ ತಾ ಕರೆ ಕರೆದು ಧರ್ಮಜ |
ನರ ಯಮಳರೊಡನೆಂದ ವಿಜಯೋನ್ಮತ್ತ ಸಂಭ್ರಮದಿ || ೩೨೩ ||

**ಕಾಂಬೋಧಿ - ಅಷ್ಟ**
ನೋಡೋ ಧರ್ಮರಾಯ | ಮಾರುತಿ ಗೆದ್ದ |
ನಾಡನಾಳುವೆಯ || ಪ ||
ನೋಡು ಕಿರೀಟಿ ಮಾ | ತಾಡಿಸು ಹರಿ ಯಮ ||
ಳಾದಿ ಭಟರು ಮುದ | ಗೂಡಿ ಸಾತ್ಯಕಿಯಿದ || ನೋಡೋ || ಅ. ಪ. ||
ವನಿತೆಗಾಡಿದ ನುಡಿ | ಕನಸದಾಯಿತು ನೋಡಿ ||
ತನುವಿಡಿವಳೆ ಮುಂತೆ | ಜನಪರ್ರೈವರಕಾಂತೆ || ನೋಡೋ || ೩೨೪ ||
ಮೂರು ಲೋಕದ ಗಂಡ | ಯಾರು ಪೇಳ್ವರು ಷಂಡ ||
ಭಾರಿ ಗಾಂಡೀವದೊ | ಳೇರಿಸಸ್ತ್ರವನಿದೊ || ನೋಡೋ || ೩೨೫ ||
ದೇವರ ಮೌನಂಗ | ಳ್ಯಾವುದರಿಯೆ ರಂಗ ||
ಮಾವನ ಕೆಡೆದಗೆ | ಭಾವನರಿದೆ ಮಿಗೆ || ನೋಡೋ || ೩೨೬ ||

**ಭಾಮಿನಿ**
ಅರಸ ಕೇಳೀ ತೆರದಿ ಕೌರವ |
ಭರಿತ ಗರ್ವದಿ ಜರೆಯೆ ಫಲುಗುಣ |
ನುರಿದು ಕೈನೀಡಿದನು ಧನುವಿಂಗಶ್ವಿನೀಸುತರು ||
ಕೆರಳಿ ಚಾಪವನೊದರಿಸಿದರೆಮು |
ತರಳನವದಿರ ನಿಲಿಸಿ ಹರಿಪದ |
ಕೆರಗಿ ಕಂಬನಿಗರೆಯೆ ಕರುಣದೊಳೆತ್ತಿ ಮನ್ನಿಸುತ || ೩೨೭ ||

**ಕಾಂಬೋಧಿ - ಝಂಪೆ**
ಆ ರಮಾಧವನ್ನೈದಿ | ಮಾರುತಾತ್ಮಜನುಸುರ |
ನಾರೈದು ಪ್ರಾಣಪವನನನು ||
ಸೇರಿಸುತಮೃತಹಸ್ತ | ವಾರಿಜದಿ ಮೈದಡವೆ |
ಜಾರಿದಸುವಾಂತು ಬಕಹರನು || ೩೨೮ ||
ಹೊಡಕರಿಸುತೆದ್ದು ಕೆಲ | ಸಿಡಿದ ಗದೆಗೊಂಡು ಘುಡು |
ಗುಡಿಸಿ ಭುಜಗಳ ಹೊಡೆವುತಾಗ ||
ಕಡು ದುರಾತ್ಮನ ಶಿರವ | ನೊಡೆವೆನೆನುತ್ತೈದೆ ಹರಿ |
ತೊಡೆಯ ತಟ್ಟಿದನು ತಾ ಬೇಗ || ೩೨೯ ||
ಅರಿತು ಮಾರುತಿ ಕಂಸ | ಹರನ ಸೂಚನೆಯ ನಿಜ |
ಕರದಿ ತೂಗುತ ಭಾರಿ ಗದೆಯ ||
ದುರುಳ ನಿನಗಿಳೆಯ ಋಣ | ಸರಿದುದೆಂದೆನುತ ತೆಗೆ |
ದೆರಗಿದನು ಕುರುಪತಿಯ ತೊಡೆಯ || ೩೩೦ ||

**ಭಾಮಿನಿ**
ಪೊಡವಿಪತಿಯವಧರಿಸು ಭೀಮನ |
ಹೊಡೆತದಲಿ ತೊಡೆಯುಡಿದು ಕೌರವ |
ರೊಡೆಯನುರುಳಿದನಿಳೆಗೆ ಮೂರ್ಛೆಯೊಳಮರ ಕುಜದಂತೆ ||
ಕೆಡೆದ ರಾಯನ ಕಂಡು ತೋಷದ |
ಕಡಲಿನಲಿ ಬಿದ್ದೆದ್ದು ಮಾರುತಿ |
ಯಡಿಗಡಿಗೆ ಮೂದಲಿಸಿ ನುಡಿಸಿದನಧಿಕ ಖಾತಿಯಲಿ || ೩೩೧ ||

**ಮಧ್ಯಮಾವತಿ - ಅಷ್ಟ**
ಏಕೆ ಪೊರಳುವೆಯೊ | ಭೂಪತಿ ಬರಿ |
ದೇಕೆ ಬಳಲುವೆಯೊ || ಪ ||
ಈ ಕಲ್ಲೊಳುರುಳುವೆಯೊ | ಏಕೆ ಸುವಿಕ್ರಮಿ |
ಏಕಛತ್ರವನಾಳುವೆ || ಸಂಗರಕೆ ದಿ |
ವಾಕರ ಸುತನಿಲ್ಲವೆ | ಸೋದರ ಶತ |
ವಾಕು ನಡಸಲಿಲ್ಲವೆ |ಭೀಷ್ಮಾದಿ ಪ |
ರಾಕ್ರಮರಿವರಲ್ಲವೆ || ಭೂಪತಿ ಬರಿ || ಅ. ಪ. ||
ಖಳಚತುಷ್ಟಯರೊಂದುಗೂಡಿ | ಯಮ್ಮ |
ಹಳುವಕಟ್ಟಿದೆ ಕುಲಗೇಡಿ ||
ಕಳವಿನ ಜೂಜಾಡಿಸಿದಕೆ ಸತಿಯ ಸೀರೆ |
ಸುಲಿಸಿದ ಪಾತಕಕೆ | ಭೋಜ್ಯದಿ ಮೋಸ |
ದೊಳು ವಿಷವಿತ್ತುದಕೆ | ಗೃಹವನುರಿ |
ಗೊಳಿಸಿದ ಸಾಹಸಕೆ | ಉತ್ತರವೆಂದು |
ತುಳಿದ ಭೂಪನ ಶಿರಕೆ || ಭೂಪತಿ ಬರಿ | ದೇಕೆ || ೩೩೨ ||

**ಭಾಮಿನಿ**
ಮುಳಿದು ಮಗಧಾರಾತಿ ನೃಪಶಿರ |
ತುಳಿದು ಮಕುಟವ ಕಳಚಲಮರರ |
ಬಳಗ ನಿಂದಿಸಿತನಿಲಜನನನ್ಯಾಯವೆಂದೆನುತ ||
ಇಳಿಯುವಶ್ರುಗಳಿಂದ ಭೀಮನ |
ತಿಳುಹಿ ಯಮಸುತ ಬಿಡಿಸುತಿರೆ ಕಳ |
ವಳಿಸಿ ಕೋಪದಿ ಕೆರಳಿ ಬಲನುರಿದೆದ್ದನಾರ್ಭಟಿಸಿ || ೩೩೩ ||

**ಘಂಟಾರವ - ಅಷ್ಟ**
ಅರರೆ ಭೀಮನ ದುರುಳತ್ವವೇನೆಂಬೆ ||
ಮುರಿದ ರಾಯನ ತೊಡೆಯ ಧರ್ಮವ |
ಮರೆತು ಮಗುಳೆನ್ನಿದಿರಿಗೆ || ೩೩೪ ||
ಲೋಕಮಾನ್ಯನ ಶಿರದಿ ಕಾಲಿರಿಸಿದ ||
ಕಾಕುತನಕೆಣೆಯುಂಟೆ ನೇಗಿಲೊ |
ಳೌಕಿ ಸೀಳುವೆನುರವನು || ೩೩೫ ||
ಗೆಲಿದರೆಲ್ಲರನಿನಿತು ಕುತಂತ್ರದಿ ||
ಕೊಲುವೆನಿನಿಬರನೆನುತಲೇಳಲು |
ತಿಳಿದು ಕುರುಪತಿ ಮೂರ್ಛೆಯ || ೩೩೬ ||

**ಭಾಮಿನಿ**
ಆ ಸುರಾಸುರರಬುಧಿಯನು ಕಡೆ |
ದಾಸಮಯ ತೆಗದೆಸೆಯಲುರುತರ |
ಘಾಸಿಯಲಿ ಮನನೊಂದು ಪೆಡೆನೆಗೆದೀಸುತೈತರುವ ||
ವಾಸುಕಿಯನನುಕರಿಸಿ ನಿಜ ಭುಜ |
ದಾ ಸಹಾಯದೊಳೊಡಲನೆಳವುತ |
ಲಾ ಸುಯೋಧನನೈದಿ ಬಲನನು ತಡೆದು ವಿನಯದಲಿ || ೩೩೭ ||

**ಕೇದಾರಗೌಳ - ಅಷ್ಟ**
ಕೋಪವೇತಕೆ ಮಗು | ಳಾಪ ಕಜ್ಜಗಳಾದು |
ದೈ ಪದ್ಮಭವಲಿಪಿಯು ||
ಆ ಪಾಂಡುಸುತರೊಳಾ | ಕ್ಷೇಪವಿನ್ನೇಕೆಂದ |
ತಾಪದಿ ಕುರುಪತಿಯು || ೩೩೮ ||

ಮೋಸದೊಳೆಲ್ಲ ಕೀ | ನಾಶಗೊಪ್ಪಿಸುತೀಗ |
ಘಾಸಿಗೈದರು ನಿನ್ನನು ||
ದೋಷಕಾರಿಗಳ ಚಂ | ಡರಿಯದೆ ಬಿಡೆನೆಂದ |
ರೋಷದಿ ಬಲರಾಮನು || ೩೩೯ ||
ಮೋಸವಿರಲಿ ಗೆಲ್ವ | ಡೇಸರವನು ಭೀಮ |
ನಾ ಸರ್ವಾತ್ಮಕನವನ ||
ಭಾಸುರ ಗದೆಯೊಳು | ವಾಸಿಸಿ ಗೆಲಿಸಿದ |
ದ್ವೇಷಬೇಡಿಂದು ಮುನ್ನಾ || ೩೪೦ ||
ನುಡಿದ ನೇಮಗಳನೆ | ನ್ನಿದಿರು ಮೀರಿದ ಖಳ |
ನೊಡಲ ಭೇದಿಸದಿರೆನು ||
ತಡೆದರಾ ಕೃಷ್ಣನ | ಸಹಿತ ನೀಪಾಂಡವ |
ಪೊಡವಿಯನೆಸಗುವೆನು || ೩೪೧ ||
ಕೊಂದರೆಮ್ಮಯ ಪಿತೃ | ವೃಂದ ಜಲಾಂಜಲಿ |
ಗೆಂದು ಶಪಿಸುವುದೆನ್ನ ||
ಸಂದುದು ಬಯಕೆ ಅ | ಖಂಡ ರಾಷ್ಟ್ರದ ದೀಕ್ಷೆ |
ತಂದೆ ಮನ್ನಿಸು ವಚನ || ೩೪೨ ||
ಶಿಷ್ಯನ ಗುಣವ ಕೊಂ | ಡಾಡಿ ಸಾತ್ಯಕಿ ಸಹ |
ಥಟ್ಟನೈದಲು ಬಲನು ||
ಚಿತ್ತದಿ ಮರುಗಿ ಧ | ರ್ಮಜ ಕೌರವೇಂದ್ರನ |
ಹತ್ತಿರ ನಡೆದು ತಾನು || ೩೪೩ ||

**ಸಾಂಗತ್ಯ - ರೂಪಕ**

ಅರಸ ನೀನೆಮ್ಮ ಕಾ | ಡಿದರು ಮತ್ಕುಲಜನೆಂ |
ದಿರಿಸಲಾರದೆ ಮಮತೆಯನು ||
ಧುರದಿ ಬಾಂಧವ ಗುರು | ಹಿರಿಯರೆಲ್ಲರ ಕೊಂದೀ |
ಧರೆಯ ಭಾಗ್ಯವನುಂಬುದೇನು || ೩೪೪ ||
ಕೋಪಿಸದಿರು ತಮ್ಮ | ನಾ ಪಡೆದಿಹ ಕರ್ಮ |
ವೀಪರಿ ನಡೆದುದಧರ್ಮ ||
ಪಾಪವರ್ಜಿತ ಪುರು | ಷಾರ್ಥಸಂಪನ್ನ ನೀ |
ವೈಪರೀತ್ಯವ ಕ್ಷಮಿಸೆಮ್ಮ|| ೩೪೫ ||
ಧರ್ಮಯುದ್ಧದಿ ಹರ | ಬೊಮ್ಮರಡ್ಡೈಸಿದ |
ಡೊಮ್ಮೆ ನಾವಳುಕೆವಿದೆಲ್ಲ ||
ನಿಮ್ಮೊಳೇನಹುದಬ್ಜ | ಜನ್ಮನಯ್ಯನ ತಂತ್ರ |
ವೆಮ್ಮಪರಾಧವೇನಿಲ್ಲ || ೩೪೬ ||
ಮರಣವಪ್ಪುದು ಕ್ಷಣಾಂ | ತರದಿ ವಾಯಸಗೃಧ್ರ |
ಚರಣವಿಡುವ ಶಿರವಿದನು ||
ಮರುತಜನೊದೆದಂತಾ | ಯ್ತರಿಯೆ ಮತ್ತೆಮಗದು |
ಕೊರತೆಯಲ್ಲೆನುತ ಕೌರವನು || ೩೪೭ ||

**ಭಾಮಿನಿ**

ಸಿಂಧುಶಯನನ ಕಂಡು ಕೈಮುಗಿ |
ದೆಂದ ಹರಿ ನೀನೆನ್ನ ಮನದೊಳು |
ನಿಂದು ಪ್ರೇರಿಸಿದಂತೆ ನಡೆಸಿದೆನಿಂದಿಗೆನ್ನಿರವು ||
ಸಂದುದೈ ಸಲೆ ವೀರಧರ್ಮದಿ |
ಬಂಧುಗಣಸಹಿತುರುಬಿ ತ್ರಿಭುವನ |
ವಂದ್ಯಪದಕರ್ಪಿಸಿದೆ ಕೊಳ್ಳೈ ಹರಣಗಾಣಿಕೆಯ || ೩೪೮ ||

**ವಾರ್ಧಕ**
ಪೃಥ್ವಿಪನ ನುಡಿಗಮರ ಮೊತ್ತ ಭಾಪೆನುತ ಸುಮ |
ವೃಷ್ಟಿಯಂಗರೆಯೆ ಹರಿ ಮಸ್ತಕವನೊಲದು ನೃಪ |
ಸತ್ತಮನ ಪೊಗಳಿ ನಿನಗಿತ್ತೆ ನಿಜಪರಿವಾರವೆತ್ತು ಚಿರಗತಿಯನೆಂದು ||
ಮತ್ತವನನುಳಿದು ಬಲಸಹಿತ ಶಿಬಿರಕೆ ದ್ರುಪದ |
ಪುತ್ರನಂ ಕಳುಹಿ ಕುರುಪಾಳೆಯವ ಕಾಂಬೆವೆಂ |
ಬರ್ಥಿಯಲಿ ಕೌಂತೇಯರೊಡನೆ ಮುರಹರ ತೆರಳಲಿತ್ತ ಧೃತರಾಷ್ಟ್ರನೃಪಗೆ || ೩೪೯ ||

**ಭಾಮಿನಿ**
ಆ ಸುಯೋಧನನಿರವ ನೆರೆ ಬಿ |
ನ್ನೈಸುತಿರೆ ಸಂಜಯನು ನೃಪತಿ ಹ |
ತಾಸೆಯಲಿ ಹಮ್ಮಯ್ಸಿ ಹಾಯೆನುತೆದ್ದು ಸತಿಸಹಿತ ||
ಈಸುತಲಿ ಕಣ್ಬಲ ಕಡಲ ಸುತ |
ನಾಸ್ಯವನು ತೋರೆನುತ ವೇದ |
ವ್ಯಾಸ ಶಿಷ್ಯನ ಜತೆಯೊಳೈದಿದ ಬಸುರ ಬಡಿದಳುತ || ೩೫೦ ||

**ಕೇದಾರಗೌಳ - ಅಷ್ಟ**
ಕುರುಹ ಕಂಡರಿವುತೀ | ರ್ದುದು ಜಗ ನೀನಿರು |
ತಿರುವ ಠಾವನು ಕುವರ ||
ಅರಸಿ ಕಾಣದೆ ಬಾಯ | ತೆರೆವುದಾಯಿತು ವಿಧಿ |
ಬರಹವೆಂದನು ಭೂವರ || ೩೫೧ ||
ಅಂಧರಾದೆಮ್ಮ ನಾ | ರೈವುದಾಯಿತು ರಣ |
ಮಂಡಲದೊಳು ತಿರುಗಿ ||
ಕಂದ ನಿನ್ನರಸುವ | ದಾಯಿತೆಂದಳು ದೇವಿ |
ಗಾಂಧಾರಿ ಮನಮರುಗಿ || ೩೫೨ ||
ಕಂಡು ಸಂಜಯ ಕೌರ | ವೇಂದ್ರನೆಡೆಗೆ ಕರೆ |
ತಂದು ತೋರಿದನಳಲಿ ||
ಕಂದ ಹಾಯೆಂದುರು | ಳಿದರು ಸಂತಾಪದಿ |
ನಂದನನಂಗದಲಿ || ೩೫೩ ||

**ಭಾಮಿನಿ**
ಕಂದ ಹಾ ಕುರುವಂಶವಾರಿಧಿ |
ಚಂದ್ರ ಹಾ ಮಮ ಹೃತ್ಸರಜ ಮಾ |
ರ್ತಾಂಡ ರಿಪುಗಜವೃಂದಕೇಸರಿರಾಜ ರಾಜೇಶ ||
ಸಂದ ಮಕ್ಕಳ ಮರೆತು ನಿನ್ನನು |
ಕಂಡು ಬದುಕುವೆನೆಂದಿರಲು ವಿಧಿ |
ಯಿಂದು ಮುನಿದನೆ ತನಗೆ ಗತಿಯೇನೆಂದ ಧೃತರಾಷ್ಟ್ರ || ೩೫೪ ||

**ಸಾವೇರಿ - ಆದಿ**
ಸುತರ ನಾ ಹಡೆದುದಿಲ್ಲ | ಇಂದಿಗೆ ಶೋಕ |
ಶತವ ಪಡೆದೆ ಸುಳ್ಳಲ್ಲ ||
ಗತಿ ಯಾರು ತಮಗೆನುತ | ಗಾಂಧಾರಿ ಬಲು |
ವ್ಯಥೆಯೊಳಾತ್ಮಜನಪ್ಪುತ || ೩೫೫ ||
ಅಗಲಿ ಜೀವಿಸಲಳವೆ | ಹರ ಹರ ಮುದ್ದು |
ಮಗನೆಂದ್ಯಾರನು ಕರೆವೆ ||
ಸುಗುಣ ನೀನೆಮ್ಮ ಬಿಟ್ಟು | ಪೋಪೆಯ ಮಗು |
ಹಗೆಯೇನೆಂದಳು ಕಂಗೆಟ್ಟು || ೩೫೬ ||

ಗದೆಯ ಘಾತಕೆ ನೋಯದು | ಮನವು ಪೆತ್ತ |
ಒಡಲಿನ ದುಗುಡವಿದು ||
ಸುಡುವುದೆಂದುರಗಕೇತ | ಕಂಬನಿದುಂಬಿ |
ನುಡಿದ ಸ್ವೈರಣೆಗೊಳುತ || ೩೫೭ ||

**ಸಾಂಗತ್ಯ - ರೂಪಕ**
ಮರುಗಲಾಗದು ಜನ್ಮ | ಮರಣಸಿದ್ಧವು ತನ್ನಂ |
ತಿರರು ಸಾಫಲ್ಯಜೀವಿತರು ||
ಎರಗದ್ಯಾರಿಗು ಧುರ | ಕೆರಗಿ ಹಿಂಗದ ಸರ್ವ |
ಸಿರಿಭೋಗಸಾಮ್ರಾಜ್ಯಯುತರು || ೩೫೮ ||
ಕಲಿಗಳೆಮ್ಮಯ ಪೂಜ್ಯ | ಕುಲಜರಾಳಿದಖಂಡ |
ನೆಲನ ತತ್ವದಿ | ಕಾದಿ ಕೊನೆಗೆ ||
ಛಲವ ಸಾಧಿಸಿ ಸಮ | ಬಲನ ಯುದ್ಧದಿ ಧರ್ಮ |
ಕೊಲಿದು ಸಾಗುವೆ ವೀರಗತಿಗೆ || ೩೫೯ ||
ಕುಲದೊಳಾಗದ ಗೋತ್ರ | ಕಲಹವಾಯ್ತಿದನೊಂದ |
ನೊಲಿದು ಮನ್ನಿಸಿರೆಮ್ಮನೋಡಿ ||
ತಿಳಿದು ಸಂಪ್ರೀತಿಯಿಂ | ದಿಳೆಯ ಸೋದರರೆಲ್ಲ |
ಸಲುಗೆಯಿಂದಿಹರೊಂದುಗೂಡಿ || ೩೬೦ ||

**ಭಾಮಿನಿ**
ಮನವನುರಿಸಿದೆನುದಿಸಿ ಪುನರಪಿ |
ಜನುಮವಾದರೆ ದಯದಿ ನೀವೇ |
ಜನಕ ಜನನಿಯರಹುದು ಬಿಡದುರೆ ಜನುಮಜನುಮದಲಿ ||
ಇನಜನೇ ಸಖನೊಂದೆ ಚಿತೆಯಲಿ |
ತನುವನಿಡಿಸುವದೆಮ್ಮ ಭಸಿತದ |
ಕಣವು ಬೆರೆದನ್ಯೋನ್ಯವಾಗಲೆನುತ್ತ ಕೈಮುಗಿದ || ೩೬೧||

**ವಾರ್ಧಕ**
ಕಂದನಳಿವಿಂಗೆ ಬೆದಬೆಂದು ಘನಸಂತಾಪ |
ಸಿಂಧುವಿಲಿ ಕೆಡೆದ ಧೃತರಾಷ್ಟ್ರ ಗಾಂಧಾರಿಯರ |
ನಂದು ನಯದಿಂ ತಿಳುಹಿ ಸಂಜಯಂ ಬಳಿಕ ಜತೆಗೊಂಡು ತೆರಳಿದನಿತ್ತಲು ||
ಬಂದು ಗುರುಸುತ ಕೌರವೇಂದ್ರನೊಳು ಶಪಥಗಳ |
ನೆಂದು ನಡೆದಾ ರಾತ್ರಿ ಕೊಂದು ಸರ್ವರ ಪಾಂಡು |
ನಂದನರ ಶಿರಗಳೆನುತವರಣುಗರಂ ವಧಿಸಿ ತಂದು ತೋರಿದ ಭೂಪಗೆ || ೩೬೨ ||

**ಕಾಂಬೋಧಿ - ಝಂಪೆ**
ಕಂಡು ಕುರುಪತಿ ಮನದಿ | ನೊಂದು ಗುರುಸುತಗೆಂದ |
ಕೊಂದೆ ಭರತಾಂಕುರವ ಬರಿದೆ ||
ಮುಂದೆ ಪಿತೃಗಳಿಗೆ ಜಲ | ಬಿಂದು ಸಿಗದಾಯ್ತೆ ಹಾ |
ಯೆಂದು ಕಣ್ಮುಚ್ಚಿ ಮರೆದೊರಗೆ || ೩೬೩ ||
ಬಿಸುಟು ಧನುಶರವ ಗುರು | ಸುತನೈದೆ ಪಾಂಡವರು |
ಬಿಸಜಾಕ್ಷಸಹಿತ ಪಾಳಯಕೆ ||
ನಸುಕಿನಲಿ ಬರುತ ಸತಿ | ಯಳಲ ಕಂಡಾಗ ಖತಿ |
ಮಸಗಿ ಕಲಿ ಭೀಮನಾಕ್ಷಣಕೆ || ೩೬೪ ||
ದುರುಳನನು ಕೊಲುವೆನೆನು | ತಿರದೆ ಬೆಂಬತ್ತೆ ಗುರು |
ತರಳ ಬಿಡೆ ಚತುರಾಸ್ಯ ಶರವ ||
ಉರುಹುತ್ತೈತರಲು ಪ್ರತಿ | ಸರಸಿಜಭವಾಸ್ತ್ರವನು |
ನರನೆಸವುತಿರೆ ಜಗತ್ರಯವ || ೩೬೫ ||

**ದ್ವಿಪದಿ**

ಉರುಹುತಿರೆ ಶರವೆರಡು ಹಳಚುತಂಬರದಿ |
ಪರಿಯರಿತು ವ್ಯಾಸ ನಾರದಮುಖ್ಯರೊದಗಿ || ೩೬೬ ||
ಶರವಿದರ ಹಿಂತೆಗೆವುದೆಂದರೀರ್ವರಿಗೆ |
ಉರುಗುತುಪಸಂಹರಿಸೆ ನರ ದ್ರೌಣಿ ಕಡೆಗೆ || ೩೬೭ ||
ಆಗದೆಂದುತ್ತರೆಯ ಗರ್ಭಕಿಡಲಾಗ |
ನಾಗತಲ್ಪನು ಪೊರೆದನದರನತಿಬೇಗ || ೩೬೮ ||
ದ್ರೋಣಪುತ್ರನ ಮದವ ಮುರಿದು ಪಾಂಡವರ |
ದಾನವಾಂತಕ ಪೊರೆದ ಮುಗಿದುದೀ ಸಮರ || ೩೬೯ ||
ಸರಿದುದಿಲ್ಲಿಗೆ ವ್ಯಾಸವರವೆನುತವರನು |
ವೆರಸಿ ರಣಭೂಮಿಗೈತಂದ ಸಂಜಯನು || ೩೭೦ ||
ಮರುಗುತಿಹ ಹಿರಿಯರನು ಸತಿಜನಂಗಳನು |
ಹರಿದಯದೊಳೊಡಬಡಿಸಿ ಬಳಿಕ ಧರ್ಮಜನು || ೩೭೧ ||
ಜ್ಞಾತಿಗಳಿಗೂರ್ಧ್ವದೈಹಿಕವನೆಸಗುತಲಿ |
ಪ್ರೀತಿಯಿಂ ಗಜಪುರಕೆ  ಬಂದನೊಲವಿನಲಿ || ೩೭೨ ||
ಪರಿಜನರ ಸಂತೈಸಿ ಪುರವ ಶೃಂಗರಿಸಿ |
ಸರುವ ಪುಣ್ಯೋದಕವನಿರದೆ ತಾ ತರಿಸಿ || ೩೭೩ ||
ವರಋಷಿಸ್ತೋಮದಾಜ್ಞೆಯಲಿ ಶುಭದಿನದಿ |
ಮೆರೆವ ಸಿಂಹಾಸನವನೇರ್ದನತಿ ಮುದದಿ || ೩೭೪ ||

**ಭಾಮಿನಿ**

ಕಂತುಪಿತನಾಜ್ಞೆಯಲಿ ಋಷಿಗಳು |
ಮಂತ್ರಜಲದಭಿಷೇಕವೆಸಗಲ |
ನಂತಹರುಷದಿ ಸತಿಯರಾರತಿಯೆತ್ತಿ ಪಾಡಿದರು ||
ಸಂತಸದೊಳೋಲಾಡಿತಿಳೆ ಶ್ರೀ |
ಕಾಂತನಮಲಚರಿತ್ರವಿದ ನಲ |
ವಾಂತುಕೇಳಿದರಿಷ್ಟ ಸಿದ್ಧಿಪುದೆಂದನಾ ಮುನಿಪ || ೩೭೫ ||

**ವಾರ್ಧಕ**

ಲೇಸೆನಿಪ ಬಡಗು ಕನ್ನಡಜಿಲ್ಲೆ ತಾಲೂಕ |
ದೈಸೆ ಸಿದ್ದಾಪುರ ನಿವಾಸದೂರ್ ಬೆಳಸಲಿಗೆ |
ಭೂಸುರಾನ್ವಯ ಪಂಡರೀಶ ನಾಮಕಸುತಗಣೇಶನಭಿಧಾನವೆನಗೆ ||
ಶೇಷಗಿರಿ ವರ ವೆಂಕಟೇಶ ನುಡಿಸಿದ ತೆರದೊ |
ಳೀಸು ಕಾವ್ಯವ ಪ್ರಥಮವಾಗಿ ರಚಿಸಿದೆನಿರುವ |
ದೋಷಗಳ ತಿದ್ದಿ ಮೆರೆಸುವ ಸುಜನರಿಷ್ಟಮಂ ಕೇಶವಂ ಪಾಲಿಸುವನು || ೩೭೬ ||

**ಮಂಗಳ ಪದ**

**ಧವಳಾರ - ಏಕ**

ಮಂಗಲಂ | ಜಯ | ಮಂಗಲಂ | ನಿತ್ಯ |
ಮಂಗಲಂ | ಶುಭ | ಮಂಗಲಂ ||
ವೇದವನುಳಿಸಿದ ಮತ್ಸ್ಯನಿಗೆ | ಭೂಧರ ಪೊತ್ತಿಹ ಕೂರ್ಮನಿಗೆ ||
ಸಾದರದಿಂದ ಕಂ | ಬದಿ ಬಂದು ಭಜಕ ಪ್ರ |
ಹ್ಲಾದನ ಪೊರೆದ ನೃಸಿಂಹನಿಗೆ || ಜಯ | ಮಂಗಲಂ || ೩೭೭ ||
ಮೇದಿನಿಚೋರನ ಸೀಳಿದಗೆ | ಭೇದದಿ ಬಲಿಯನು | ತುಳಿದವಗೆ ||
ಕ್ರೋಧದಿ ಕ್ಷತ್ರಿಯ | ಕುಲವ ಸಂಹರಿಸಿದ |
ಮಾಧವ ಭಾರ್ಗವ | ರಾಮನಿಗೆ || ಜಯ | ಮಂಗಲಂ || ೩೭೮ ||
ರಾವಣಮಥನಗೆ ಕೃಷ್ಣನಿಗೆ | ತೀವಿದ ಬೌದ್ಧಗೆ | ಕಲ್ಕ್ಯನಿಗೆ ||
ಭೂವಲಯದೊಳಿರ್ದು | ಭಜಕರ ಸಲಹುವ |
ಶ್ರೀವರ ವೆಂಕಟ | ರಮಣನಿಗೇ || ಜಯ | ಮಂಗಲಂ || ೩೭೯ ||

***** ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಗಣಪತಿ ವಿಠ್ಠಪ್ಪ ಹೆಗಡೆ (ಗೋಳಗೋಡು), ಬೆಳಸಲಿಗೆ, ಸಿದ್ದಾಪುರ ಅಂಚೆ, ಉ.ಕ.  (೧೯೫೩)

**ಪ್ರಸಂಗ ಪ್ರತಿ ಆಧಾರ:** ಕವಿಯೇ ಪ್ರಕಾಶಿಸಿದ ಮೂಲ ಕೃತಿ

**ಪ್ರಸಂಗ ಪ್ರತಿ ಕೊಟ್ಟವರು:** ಸುರೇಶ್ ಹೆಗಡೆ, ಬೆಳಸಲಿಗೆ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಬರವಣಿಗೆ:** ಶಶಿಕಲಾ ಮೂರ್ತಿ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಪ್ರಕಾಶನ:** ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ